ಪ್ರೊ॥ ಎಂ. ಹಿರಿಯಣ್ಣ

ಪ್ರೊ॥ ಎಸ್.ಕೆ. ರಾಮಚಂದ್ರರಾವ್

ಪ್ರೊ॥ ಎಂ. ಹಿರಿಯಣ್ಣನವರು

ವಿದ್ಯಾಲಂಕಾರ
ಪ್ರೊ॥ ಎಸ್. ಕೆ. ರಾಮಚಂದ್ರರಾವ್

ಸಂಪಾದಕರು :
ವಿ. ಎಂ. ಇನಾಂದಾರ್

ಐ ಬಿ ಎಚ್ ಪ್ರಕಾಶನ
ಗಾಂಧಿನಗರ, ಬೆಂಗಳೂರು–560009

*

ಸರ್ವಸ್ವಾಮ್ಯ :

ಪ್ರಕಾಶಕರವು

*

ಚಿತ್ರಗಳು :

ಮನಮೋಹನ್

*

ಮೊದಲನೆಯ ಮುದ್ರಣ :

ಜೂನ್ ೧೯೭೩

*

ಅಧಿಕೃತ ಮಾರಾಟಗಾರರು :

ಇಂಡಿಯ ಬುಕ್ ಹೌಸ್

ಗಾಂಧಿನಗರ, ಬೆಂಗಳೂರು–೫೬೦೦೦೯

*

ಪ್ರಕಾಶಕರು :

ಶ್ರೀ ಪಿ. ಎನ್. ಕಾಮತ್

ಐ ಬಿ ಎಚ್ ಪ್ರಕಾಶನ, ಗಾಂಧಿನಗರ,

ಬೆಂಗಳೂರು–೫೬೦೦೦೯

*

ಮುದ್ರಕರು :

ಹೆಚ್. ಎಸ್. ಎನ್. ರಾವ್

ಐ ಬಿ ಎಚ್ ಪ್ರಕಾಶನ ಪ್ರಿಂಟರಿ

ರಾಮಯ್ಯ ಇಂಡಸ್ಟ್ರಿಯಲ್ ಎಸ್ಟೇಟ್

ಬೆಂಗಳೂರು – ೫೬೦೦೫೪

ಮೈಸೂರಿನ ಮಹನೀಯರು

ಮೈಸೂರು ಸೀಮೆಯಲ್ಲಿ ನೂರಾರು ಮಹನೀಯರು ಕಾಣಿಸಿಕೊಂಡಿದ್ದಾರೆ. ಇವರಲ್ಲಿ ಹಲವರು ನಾಡಿನಲ್ಲೆಲ್ಲ ವಿಖ್ಯಾತರು; ಕೆಲವರು ಪ್ರಪಂಚದಲ್ಲೆಲ್ಲ ಪ್ರಖ್ಯಾತಿಯನ್ನು ಗಳಿಸಿದ್ದಾರೆ. ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಹೆಸರನ್ನು ನೀವು ಕೇಳಿಲ್ಲವೆ? ಸಮರ್ಥರಾದ ಅಧಿಕಾರಿಗಳಾಗಿ, ದಕ್ಷರಾದ ದಿವಾನರಾಗಿ, ಚತುರರಾದ ಇಂಜಿನಿಯರ್ ಆಗಿ, ಪ್ರಾಮಾಣಿಕರಾದ ಪ್ರಜೆಯಾಗಿ ಅವರು ಹೆಸರು ಪಡೆದಿದ್ದಾರೆ. ನಮ್ಮ ನಾಡಿನಲ್ಲಿ ಕೈಗಾರಿಕೆ ಹೆಚ್ಚಬೇಕು, ಉದ್ಯಮ ಬೆಳೆಯಬೇಕು, ನಾಡಿನ ಸಂಪತ್ತು ಹೆಚ್ಚಬೇಕು ಎಂದು ಅವರು ಬದುಕಿದ ಒಂದೊಂದು ಗಳಿಗೆಯೂ ಯೋಚನೆ ಮಾಡುತ್ತಿದ್ದರು ಅವರು. ಅವರು ನಮ್ಮ ಸೀಮೆಯವರೆಂಬುದೇ ನಮಗೆ ಹೆಮ್ಮೆ; ಅವರೂ ಹಿರಿಯಣ್ಣನವರೂ ಪರಿಚಿತರೇ. ಹಾಗೆಯೇ ಸಂಗೀತದಲ್ಲಿ ಎತ್ತಿದ ಕೈ ಆಗಿ ಪ್ರಪಂಚದ ರಸಿಕರೆಲ್ಲ ತಲೆದೂಗುವಂತೆ ಮಾಡಿ ಮೆರೆದ ವೀಣೆ ಶೇಷಣ್ಣನವರು, ಬಿಡಾರದ ಕೃಷ್ಣಪ್ಪನವರು; ಕಲಾ ಪ್ರಪಂಚದಲ್ಲಿ ಕಣ್ವಋಷಿಯಂತೆ ಇದ್ದ ಕೆ. ವೆಂಕಟಪ್ಪನವರು; ಆಡಳಿತವನ್ನು ವಿಚಕ್ಷಣರಾಗಿ ನಿರ್ವಾಹಮಾಡಿದ ಕೆ. ಶೇಷಾದ್ರಿ ಅಯ್ಯರ್, ಮಿರ್ಜಾ ಇಸ್ಮೈಲ್; ಸಮಾಜ ಸೇವೆಯಲ್ಲಿ ಜೀವನವನ್ನು ತೆಯ್ದು 'ಮೈಸೂರು ತಾತಯ್ಯ'ನೆಂದು ಹೆಸರಾದ ಎಂ. ವೆಂಕಟಕೃಷ್ಣಯ್ಯನವರು, ಸುಸಂಸ್ಕೃತರಾದ ಮಹಾರಾಜರೆಂದು ನಾಡಿನಲ್ಲೆಲ್ಲ ಗೌರವ ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರು; ಪಾಂಡಿತ್ಯದಲ್ಲಿ

ಸರಿಯಿಲ್ಲದವರೆಂದು ಹೆಸರಾಂತ ರುದ್ರಪಟ್ಟಣದ ಶ್ಯಾಮ ಶಾಸ್ತ್ರಿಗಳು, ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು; ಸಂನ್ಯಾಸಿಗಳಲ್ಲಿ ಜೀವನ್ಮುಕ್ತರೆಂದು ಪ್ರಸಿದ್ಧರಾದ ಶೃಂಗೇರಿ ಜಗದ್ಗುರು ಚಂದ್ರಶೇಖರಭಾರತೀಸ್ವಾಮಿಗಳು—ಇವರೆಲ್ಲ ಮೈಸೂರಿನ ಮಹನೀಯರೇ. ಹಿರಿಯಣ್ಣನವರ ಕಾಲದಲ್ಲಿದ್ದವರೇ, ಅವರಿಗೆ ತಿಳಿದಿದ್ದವರೇ.

ಇವರೆಲ್ಲರ ನಡುವೆ ಹಿರಿಯಣ್ಣನವರು ಬೆಳಗಿದರು; ಇವರೆಲ್ಲರಿಂದಲೂ ಮರ್ಯಾದೆ ಪಡೆದರು. ಮಹನೀಯರಿಂದಲೇ ಮಹನೀಯರೆನಿಸಿಕೊಂಡರು; ಮರ್ಯಾದೆ ಪಡೆದಿದ್ದವರಿಂದಲೇ ಮರ್ಯಾದೆ ಪಡೆದರು. ಇದಕ್ಕೇನು ಕಾರಣ? ಅವರ ವ್ಯಕ್ತಿತ್ವವೇ ಕಾರಣ. ಈ ಸಣ್ಣ ಪುಸ್ತಕದಲ್ಲಿ ಅವರ ವ್ಯಕ್ತಿತ್ವವನ್ನು ನಿಮಗೆ ತಿಳಿಯಾದ ಮಾತಿನಲ್ಲಿ ತಿಳಿಯಪಡಿಸುವುದೇ ಉದ್ದೇಶ.

ಇಂಗ್ಲೀಷಿನಲ್ಲಿ ಇವರು ಎಂ. ಹಿರಿಯಣ್ಣ; ಇಲ್ಲಿ 'ಎಂ' ಎಂದರೆ ಮೈಸೂರು. ಮೈಸೂರು ಅವರ ಊರು. ಅವರು ಎಳೆತನವನ್ನು ಕಳೆದದ್ದು ಇಲ್ಲಿ, ಕಲಿತದ್ದು ಇಲ್ಲಿ, ಕೆಲಸ ಮಾಡಿದ್ದು ಇಲ್ಲಿ, ನಿವೃತ್ತರಾಗಿ ಬಾಳನ್ನು ಕಳೆದುದೂ ಇಲ್ಲಿ, ತೀರಿಕೊಂಡುದೂ ಇಲ್ಲಿಯೇ. ನಾಡಿನಲ್ಲೆಲ್ಲ, ಪ್ರಪಂಚದಲ್ಲೆಲ್ಲ ಅವರ ಹೆಸರು ಓಡಾಡಿದರೂ ಅವರಿದ್ದುದು ಮಾತ್ರ ಮೈಸೂರಿನಲ್ಲಿಯೇ. ಹೆಚ್ಚಾಗಿ ಹೊರಗೆ ಹೋದವರಲ್ಲ. ವಿದೇಶಗಳಿಗೆ ಅವರನ್ನು ಕರೆಯಿಸಿಕೊಳ್ಳಬೇಕೆನ್ನುವ ಪ್ರಯತ್ನ ಹಲವಾರು ಬಾರಿ ನಡೆಯಿತು; ಆದರೆ ಅವರು ಒಮ್ಮೆಯೂ ಊರು ಬಿಡಲಿಲ್ಲ. ಇದರಿಂದ ಅವರ ವಿಖ್ಯಾತಿಗೇನು ಕುಂದು ಬರಲಿಲ್ಲವೆನ್ನಿ. ಆದರೂ ಮೈಸೂರಿಗೂ ಅವರಿಗೂ ತೀರದ ನೆಂಟಾಯಿತು. ಮೈಸೂರು ಹಿರಿಯಣ್ಣನವರೆನ್ನುವುದು ತೀರ ಸಾರ್ಥಕವಾಯಿತು.

ಅಷ್ಟೇ ಅಲ್ಲ, ವಿದೇಶಗಳಲ್ಲಿರುವ ವಿದ್ವಾಂಸರಿಗೆ ಭಾರತ ದೇಶ ಗೊತ್ತು, ಅದರಲ್ಲಿರುವ ಊರುಗಳೆಲ್ಲ ತಿಳಿದಿರುವುದಿಲ್ಲ. ಅವರ ಪಾಲಿಗೆ ಮೈಸೂರೆಂದರೆ ಹಿರಿಯಣ್ಣನವರ ಊರು ಅಷ್ಟೆ; ಉಳಿದಂತೆ ಮೈಸೂರಿನ ಪರಿಚಯು ಅವರಿಗಿಲ್ಲ. ಅವರಲ್ಲಿ ಎಷ್ಟೋ ಮಂದಿ ಹಿರಿಯಣ್ಣನವರನ್ನು ಕಾಣಲೆಂದೇ ಮೈಸೂರಿಗೆ ಬಂದುದೂ ಉಂಟು.

ಇಷ್ಟಾದರೂ ಇಂದಿನ ಮಕ್ಕಳಿಗೆ, ಬಹುಮಂದಿ ತರುಣರಿಗೆ, ಹಿರಿಯಣ್ಣನವರ ಹೆಸರು ತಿಳಿಯದು. ಕಾರಣ ವೇನು ಬಲ್ಲಿರಾ? ಅವರ ಸ್ವಭಾವವೇ ಕಾರಣ. ಅವರು ದೇಶದೇಶಗಳಲ್ಲಿ ತಿರುಗಾಡಿ, ದೊಡ್ಡ ದೊಡ್ಡ ಸಭೆಗಳಲ್ಲಿ ಭಾಷಣಮಾಡಿ, ಜನರ ಕಣ್ಣು ಕೋರೈಸುವಂತೆ ಪ್ರಸಿದ್ಧರಾದವರಲ್ಲ. ಪತ್ರಿಕೆಗಳಲ್ಲಿ ದಿನಬೆಳಗೂ ಅವರ ಹೆಸರು ಬರುತ್ತಿದ್ದುದಿಲ್ಲ. ಸಾರ್ವಜನಿಕ ವ್ಯವಹಾರದಿಂದ ಅವರು ಎಂದೂ ದೂರವೇ. ರಾಜಕೀಯ ಚಟುವಟಿಕೆಗಳಂತೂ ಹತ್ತಿರವೂ ಸುಳಿಯುತ್ತಿರಲಿಲ್ಲ. ಅವರನ್ನು ಸನ್ಮಾನ ಮಾಡಲು ಹಲವಾರು ಸಂಸ್ಥೆಗಳು ಆಸೆಪಟ್ಟವು. ಆದರೆ ಅವರು ಯಾವ ಸನ್ಮಾನ ಬಂದರೂ ವಿನಯದಿಂದ ನಿರಾಕರಿಸುವರು. ತಾವಾಗಿ ಮೇಲೆಬಿದ್ದು ಯಾವ ಸಭೆ, ಸಂಘಗಳಲ್ಲಿಯೂ ಭಾಗವಹಿಸರು. ತೀರ ವಿಧಿಯಿಲ್ಲದಿದ್ದರೆ ಎಷ್ಟು ಬೇಕೋ ಅಷ್ಟೇ ಭಾಗವಹಿಸಿ, ಕಾಣದಂತೆ ಹಿಂದಕ್ಕೆ ಸರಿಯುವರು.

ಏರುಪೇರಿಲ್ಲದ ಆಡಂಬರವಿಲ್ಲದ ಬದುಕನ್ನು ಗದ್ದಲವಿಲ್ಲದೆ ಬದುಕಿ, ತಮ್ಮ ಬದುಕಿನಂತೆಯೇ ಬರಹವನ್ನೂ ನಿರಾಡಂಬರ–ಸರಳ–ಸುಂದರ–ಸ್ಪಷ್ಟ ಮಾಡಿ, ತೀರಿಕೊಂಡವರು ಅವರು. ತಮ್ಮಲ್ಲಿ ಅಪಾರವಾದ ಪಾಂಡಿತ್ಯ ಇದ್ದಿತಾ

ದರೂ ಅದನ್ನು ಹೊರಗೆ ತೋರಿಸಿಕೊಳ್ಳುತ್ತಿರಲಿಲ್ಲ. 'ಎಲೆ ಮರೆಯ ಕಾಯಿ' ಎನ್ನುತ್ತಾರಲ್ಲ; ಹಾಗೆಯೇ ಇದ್ದವರು. ಅವರು ಆದರೆ ಕಾಯಲ್ಲ, ಹಣ್ಣು ಅಷ್ಟೆ. ಹೀಗಾಗಿ ಬಹು ಮಂದಿ ಅವರ ಹೆಸರನ್ನು ಕೇಳರಿಯರು.

ಆದರೆ ಅವರನ್ನು ಹತ್ತಿರ ನೋಡಿದವರು, ಅವರ ವಿಚಾರ ಅರಿತವರು, ಅವರ ಬರಹಗಳನ್ನು ಓದಿದವರು ಯಾರೂ ಅವರನ್ನು ಮರೆಯುವುದು ಸಾಧ್ಯವಿಲ್ಲ. ಹುಣ್ಣಿಮೆಯ ಬೆಳದಿಂಗಳಂತೆ ತಿಳಿಯಾದ, ಸೊಗಸಾದ, ಸೌಮ್ಯವಾದ ಕಳೆ ಅವರ ಬದುಕಿನದು. ಹೊಳಪು ಕಡಮೆ, ಕಣ್ಣು ಚುಚ್ಚುವ ಬೆಳಕಲ್ಲ. ಸ್ವಲ್ಪ ಹೊತ್ತಾದರೆ ಸಾಕೆನಿಸುವದಲ್ಲ, ಎಷ್ಟು ಅನುಭವಿಸಿದರೂ ಆಯಾಸವಾಗದಂಥದು. ಬದುಕಿನಲ್ಲಿ ಕುತೂಹಲವನ್ನು ಕೆರಳಿಸುವಂಥ ವಿವರಗಳು ಯಾವುವೂ ಇರದಿದ್ದರೂ, ಅದನ್ನು ತಿಳಿದಾಗ ಮನಸ್ಸಿಗೆ ನೆಮ್ಮದಿಯಾಗುತ್ತದೆ, ಜೀವ ಹಗುರಾಗುತ್ತದೆ.

ಹಿರಿಯಣ್ಣನವರ ವಿಚಾರ ನಮಗೆ ಹೆಚ್ಚಾಗಿ ತಿಳಿಯದು. ಅವರು ತುಂಬ ಮಿತಭಾಷಿಗಳು, ಎಂದರೆ ಹೆಚ್ಚು ಮಾತನಾಡುವವರಲ್ಲ. ತಮ್ಮ ಕಷ್ಟ–ಸುಖ, ಮನೆತನ–ಎಳೆತನ, ಸಾಧನೆ–ಸಿದ್ಧಿಗಳನ್ನು ಕುರಿತು ಯಾರೊಡನೆಯೂ ಮಾತನಾಡುತ್ತಿರಲಿಲ್ಲ. ಎಷ್ಟು ಅಗತ್ಯವೋ, ಪ್ರಕೃತವೋ ಅಷ್ಟೇ ಮಾತು; ಯಾವ ವಿಚಾರವಾಗಿ ಆಗಲಿ, ಮಾತು ಬೆಳೆಸುವವರಲ್ಲ. ತಮ್ಮ ಮನೆಯಲ್ಲಿ ಕೂಡ ಇದೇ ಪ್ರವೃತ್ತಿ. ಹೀಗಾಗಿ ಅವರ ಬದುಕು ಇತರರಿಗೆ ಅಷ್ಟಾಗಿ ತಿಳಿದುಬರಲಿಲ್ಲ; ಅವರ ಸ್ವಂತ ಜೀವನದ ವಿವರಗಳು ಯಾರಿಗಾದರೂ ತಿಳಿದಿರುವುದು ವಿರಳವೇ. ಹತ್ತಿರದ ನೆಂಟರಿಗೆ ಕೂಡ ತಿಳಿದಿರುವುದು ಮೇಲು ಮೇಲಿನ ಸಂಗತಿಗಳಷ್ಟೇ. ತಮ್ಮ ಬದುಕನ್ನು

ತಮ್ಮ ಪಾಲಿಗೇ ಕಟ್ಟುನಿಟ್ಟಾಗಿ ಇಟ್ಟುಕೊಂಡಿದ್ದರೆಂದು ತೋರುತ್ತದೆ. ಅದನ್ನು ಯಾವ ಕಾರಣಕ್ಕಾಗಲೀ ಬೇರೆಯವರ ಮೇಲೆ ಹೇರಲು ಅವರು ಬಯಸಲಿಲ್ಲ.

ಎಳೆತನದ ಮೊಳಕೆ

ಹಿರಿಯಣ್ಣನವರ ಹಿರಿಯರು ಮೈಸೂರಿನವರೇ; ಮೈಸೂರು ನಗರದಲ್ಲಿಯೇ ಬಾಳಿ ಬದುಕಿದವರು. ಮನೆಯಲ್ಲಿ ಕನ್ನಡ ಮಾತನಾಡುವ ಸ್ಮಾರ್ತಬ್ರಾಹ್ಮಣರು. ಹಿರಿಯಣ್ಣನವರ ತಂದೆಯ ಹೆಸರು ನಂಜುಂಡಯ್ಯ. ಮೈಸೂರು ನಗರದ ಶಿವರಾಮಪೇಟೆಯಲ್ಲಿ ಇವರ ಮನೆಯಿದ್ದಿತು. ಅವರಿಗೆ ಮೂವರು ಗಂಡುಮಕ್ಕಳು ; ಎರಡನೆಯವರೇ ಹಿರಿಯಣ್ಣನವರು ಇನ್ನಿಬ್ಬರು ಮಕ್ಕಳು ಎನ್. ಸೀತಾರಾಮಯ್ಯ, ಎಂ. ಎನ್. ಕೃಷ್ಣರಾವ್ ಎಂಬುವರು. ಇವರಲ್ಲಿ ಎಂ. ಎನ್. ಕೃಷ್ಣರಾವ್ ಮೈಸೂರು ಸರ್ಕಾರದಲ್ಲಿ ಅನೇಕ ಉನ್ನತ ಉದ್ಯೋಗಗಳಲ್ಲಿದ್ದು ಕಡೆಗೆ ಕೊಂಚಕಾಲ ಮೈಸೂರು ಸಂಸ್ಥಾನದ ದಿವಾನರೂ ಆಗಿದ್ದರು. ಆಗಿನ ಬ್ರಿಟಿಷ್ ಆಳರಸರು ಅವರ ಜಾಣತನಕ್ಕೆ, ಆಡಳಿತದ ಅಚ್ಚುಕಟ್ಟಿಗೆ ಮೆಚ್ಚಿಕೊಂಡು 'ಸರ್' ಎಂಬ ಬಿರುದನ್ನು ಕೊಟ್ಟಿದ್ದರು. ಬೆಂಗಳೂರು ಬಸವನಗುಡಿ ಬಡಾವಣೆಯಲ್ಲಿ ಅವರ ಮನೆಯಿದೆ; ಅದರ ಸಮೀಪದಲ್ಲಿರುವ ಪಾರ್ಕಿಗೆ 'ಸರ್ ಎಂ. ಎನ್. ಕೃಷ್ಣರಾವ್ ಪಾರ್ಕ್' ಎಂದೇ ಸರ್ಕಾರದವರು ಹೆಸರಿಟ್ಟಿದ್ದಾರೆ. ಈಗಲೂ ಅದಕ್ಕೆ ಅದೇ ಹೆಸರಿದೆ.

ಹಿರಿಯಣ್ಣನವರು ಹುಟ್ಟಿದುದು ೧೮೭೧ನೆಯ ವರ್ಷ ಮೇ ತಿಂಗಳ ಏಳನೆಯ ದಿನದಂದು ; ಮೈಸೂರಿನಲ್ಲಿಯೇ ಹುಟ್ಟಿದುದು. ಸುಮಾರಾಗಿ ಅನುಕೂಲವಾಗಿದ್ದ ಸಂಸಾರ

ವಾದುದರಿಂದ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸಕ್ಕೆ ಏರ್ಪಾಟಾಯಿತು. ತಂದೆ ತಾಯಿಯರು ಸಂಪ್ರದಾಯಸ್ಥರಾದುದರಿಂದ ಮಕ್ಕಳಿಗೆ ಮೊದಲಲ್ಲೇ ಸಂಸ್ಕೃತ ಶಿಕ್ಷಣವನ್ನು ಕೊಡಿಸಿದರು. ಆಗಿನ ಕಾಲಕ್ಕೆ, ಎಂದರೆ ನೂರು ವರ್ಷಗಳ ಹಿಂದೆ, ಮೈಸೂರಿನಲ್ಲಿ ಸಂಸ್ಕೃತವಿದ್ಯೆಗೆ ಪ್ರಸಿದ್ಧವಾಗಿದ್ದ ಶಾಲೆ 'ಸದ್ವಿದ್ಯಾಪಾಠಶಾಲೆ'. ನಂಜುಂಡಯ್ಯನವರು ತಮ್ಮ ಮೂರೂ ಮಕ್ಕಳನ್ನು ಈ ಶಾಲೆಗೆ ಸೇರಿಸಿದರು.

ನೀವು ಈ ಶಾಲೆಯ ವಿಚಾರ ಕೊಂಚ ತಿಳಿಯಬೇಕು. ಈ ವರ್ಷಕ್ಕೆ ಈ ಶಾಲೆ ಆರಂಭವಾಗಿ ನೂರುಹದಿನೆಂಟು ವರ್ಷಗಳು ತುಂಬುತ್ತವೆ; ಕಳೆದ ವರ್ಷ ಹಿರಿಯಣ್ಣನವರು ಹುಟ್ಟಿ ನೂರು ವರ್ಷಗಳಾದುವು. ಶಾಲೆ ಶುರುವಾದುದು ೧೮೭೬ರಲ್ಲಿ. ಮೈಸೂರಿನಲ್ಲಿ ತುಂಬ ಹಳೆಯ ಬಡಾವಣೆಯಾದ ದೇವೀರಮ್ಮಣ್ಣಿ ಅಗ್ರಹಾರದಲ್ಲಿ ಹಂಪೇ ಅರಸು ಎನ್ನುವ ಶ್ರೀಮಂತರು ವಾಸಿಸುತ್ತಿದ್ದರು ; ಮಹಾರಾಜರಿಗೆ ನೆಂಟರು ಅವರು. ಅವರಿಗೆ ಸಂಸ್ಕೃತವೆಂದರೆ ಹೆಚ್ಚಿನ ಅಭಿಮಾನ. ತಮ್ಮ ಮನೆಯಲ್ಲಿಯೇ ಒಂದು ಭಾಗವನ್ನು ಬಿಟ್ಟು ಕೊಟ್ಟು ಅಲ್ಲಿ ಸಂಸ್ಕೃತ ಶಾಲೆಯನ್ನು ನಡೆಸುವ ಏರ್ಪಾಡು ಮಾಡಿದರು. ಮುಂದೆ ನಲವತ್ತು ವರ್ಷಗಳು ಶಾಲೆ ಅಲ್ಲಿಯೇ ನಡೆಯಿತು.

ಶಾಲೆಯನ್ನು ನಡೆಯಿಸುತ್ತಿದ್ದವರು ಆ ಕಾಲಕ್ಕೆ ಊರಿಗೇ ದೊಡ್ಡ ಪಂಡಿತರು, ಪೆರಿಯಸ್ವಾಮಿ ತಿರುಮಲಾಚಾರ್ಯರೆಂಬುವರು. ಕನ್ನಡ, ಸಂಸ್ಕೃತ ಎರಡರಲ್ಲಿಯೂ ವಿದ್ವಾಂಸರು ಅವರು; 'ಉಭಯ ಭಾಷಾ ವಿಶಾರದ'ರೆಂದು ಜನ ಅವರನ್ನು ಕರೆಯುತ್ತಿದ್ದರು. ಶಾಲೆಯನ್ನು ತೆರೆಯುವ ಯೋಚನೆ ಅವರದ್ದೇ. ಪಂಡಿತರು ಮಾತ್ರವಲ್ಲದೆ ಪಾಠ

ಹೇಳಿಕೊಡುವುದರಲ್ಲಿಯೂ ಚೆನ್ನಾಗಿ ನುರಿತಿದ್ದವರು. ಶಾಲೆಗೆ ಅವರೇ ಮುಖ್ಯೋಪಾಧ್ಯಾಯರು. ಮೈಸೂರಿನಲ್ಲಿ ನೂರಾರು ಮಂದಿ ಗೃಹಸ್ಥರು ತಮ್ಮ ಮಕ್ಕಳನ್ನು ಈ ಶಾಲೆಗೆ ಕಳು ಹಿಸುತ್ತಿದ್ದರು. ಶಾಲೆ ತುಂಬ ಪ್ರಸಿದ್ಧವಾಗಿ ಬಿಟ್ಟಿತು. ನಲ ವತ್ತು ವರ್ಷಗಳು ಹಂಪೇ ಅರಸಿನವರ ಮನೆಯಲ್ಲಿ ಇದ್ದ ಶಾಲೆ ಗರ್ಲ್ಸ್‌ಳರಲ್ಲಿ, ಎಂದರೆ ಎಪ್ಪತ್ತೆಂಟು ವರ್ಷಗಳ ಹಿಂದೆ, ತನ್ನದೇ ಆದ ಕಟ್ಟಡಕ್ಕೆ ಬಂದಿತು. ಮೈಸೂರಿನ ಶ್ರೀಮಂತ ರಲ್ಲಿ ಒಬ್ಬರಾಗಿದ್ದ ಸಾಹುಕಾರ್ ಗಂಜಿ ನರಸಿಂಹಯ್ಯ ಎಂಬು ವರು ಈ ಕಟ್ಟಡವನ್ನು ಶಾಲೆಗೆಂದು ದಾನಮಾಡಿದರು. ಆಗ ಮಹಾರಾಜರಾಗಿದ್ದ ಚಾಮರಾಜ ಒಡೆಯರೇ ಈ ಕಟ್ಟಡ ದಲ್ಲಿ ಶಾಲೆಯಆರಂಭೋತ್ಸವವನ್ನು ನೆರವೇರಿಸಿದರು. ಶಾಲೆ ಯಲ್ಲಿ ನಾನ್ನೂರು ಜನ ವಿದ್ಯಾರ್ಥಿಗಳಿದ್ದರು.

ಈ ಶಾಲೆಯಲ್ಲಿ ಓದಿದ ವಿದ್ಯಾರ್ಥಿಗಳಲ್ಲಿ ಹಲವಾರು ಮಂದಿ ಮುಂದೆ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿ ದರು, ತುಂಬ ಕೀರ್ತಿಯನ್ನು ಗಳಿಸಿದರು, ಮೈಸೂರಿನ ಮಹನೀಯರಾದರು. ಅವರಲ್ಲಿ ಕೆಲವರ ಹೆಸರನ್ನು ಕೇಳಿ– 'ಕವಿತಿಲಕ' ಸೋಸಲೆ ಅಯ್ಯಾಶಾಸ್ತ್ರಿಗಳು ; ಅರಮನೆಯ ಆಸ್ಥಾನ ವಿದ್ವಾಂಸರಾಗಿದ್ದು, ಕವಿಗಳು. ಸಂಸ್ಕೃತ ಪಂಡಿ ತರು ಎಂದು ಪ್ರಸಿದ್ಧರಾದರು. ಪಂಡಿತ ದೇವಶಿಖಾಮಣಿ ಅಳಸಿಂಗ್ರಾಚಾರ್ಯರು ಕನ್ನಡದಲ್ಲಿ ವಾಲ್ಮೀಕಿರಾಮಾಯಣ ವನ್ನೂ ಭಾಗವತವನ್ನೂ ಬರೆದು ಹೆಸರಾದರು. 'ರಾವ್ ಬಹದ್ದೂರ್' ಎಂ. ರಂಗಾಚಾರ್ಯರು ಇತಿಹಾಸದಲ್ಲಿ ತತ್ತ್ವ ಶಾಸ್ತ್ರದಲ್ಲಿ ಎತ್ತಿದ ಕೈ. ಸರ್ ಎಂ. ಕಾಂತರಾಜ ಅರಸಿ ನವರು ಮೈಸೂರು ಸಂಸ್ಥಾನದ ದಿವಾನರಾದರು. 'ಜ್ಯೋತಿಷರತ್ನ' ನರಹರಿಜೋಯಿಸರು ಆಸ್ಥಾನವಿದ್ವಾಂಸ



ರಾಗಿ ಪ್ರಸಿದ್ಧರಾದರು. 'ಸಂಗೀತಶಾಸ್ತ್ರರತ್ನ' ಕೆ. ವಾಸುದೇವಾಚಾರ್ಯರು ಇಡೀ ಭಾರತದಲ್ಲಿಯೇ ದಕ್ಷಿಣಾದಿ ಸಂಗೀತದ ಆಚಾರ್ಯ ಪುರುಷರಾದರು.

ಹಿರಿಯಣ್ಣನವರೂ ಅವರ ಸೋದರರೂ ಇದೇ ಶಾಲೆಯಲ್ಲಿ ಸಂಸ್ಕೃತ ಕಲಿತರು. ಶಾಲೆ ಹಂಪೆ ಅರಸಿನವರ ಮನೆಯಲ್ಲಿದ್ದಾಗಲೇ ಅಲ್ಲಿಗೆ ಹೋಗುತ್ತಿದ್ದರು. ಈ ಶಾಲೆಯಲ್ಲಿ ಮೊದಲು ಸಂಸ್ಕೃತದ ಪರಿಚಯವನ್ನು ಪಡೆದುಕೊಂಡ ಮೇಲೆ ಹಿರಿಯಣ್ಣನವರು ಆಗಿನ ಕಾಲದ ಪದ್ಧತಿಯಂತೆ ಇನ್ನೊಬ್ಬ ಪಂಡಿತರ ಮನೆಗೆ ಹೋಗಿ ಅಲ್ಲಿ ಸಂಸ್ಕೃತ ಶಿಕ್ಷಣವನ್ನು ಮುಂದುವರಿಸಿದರು. ಅವರು ಯಾರು ಗೊತ್ತೆ?

ಕಾಶಿ ಶೇಷರಾಮಶಾಸ್ತ್ರಿಗಳೆಂಬುವರು. ಇವರ ಹಿರಿಯರು ಕಣಿವೆ ಕೆಳಗಿನ, ಎಂದರೆ ತಮಿಳುನಾಡಿನ, ವಡಮರಾಗಿದ್ದ ಉತ್ತರ ಆರ್ಕಾಡು ಜಿಲ್ಲೆಯ ಮಂಡಕೊಳತ್ತೂರು ಪ್ರಾಂತ್ಯದವರು ; ವೇದಾಂತಿಗಳ ಮನೆತನ.

ಸುಮಾರು ೧೮೨೦ ರಲ್ಲಿ ಮುಮ್ಮಡಿ ಕೃಷ್ಣರಾಜಒಡೆಯರು ಮಹಾರಾಜರಾಗಿದ್ದಾಗ ಕಾಶೀರಾಮಶಾಸ್ತ್ರಿಗಳೆಂಬ ಹಿರಿಯರು ಆ ಕಡೆಯಿಂದ ಬಂದು ಮೈಸೂರಿನಲ್ಲಿ ನೆಲೆಸಿದ್ದರು ; ಅರಮನೆಯ ಧರ್ಮಾಧಿಕಾರಿಗಳೂ ಆಗಿದ್ದರು. ಅವರ ನಂತರ ಅವರ ಮಗ ಶೇಷಶಾಸ್ತ್ರಿಗಳೂ ಧರ್ಮಾಧಿಕಾರಿಗಳಾದರು. ಇವರು ೧೮೬೦ ರಲ್ಲಿ ತೀರಿಕೊಂಡಾಗ ಸಂನ್ಯಾಸಿಗಳಾಗಿದ್ದು ನಾಗೇಶ್ವರ ಬ್ರಹ್ಮತಂತ್ರ ಭಾರತೀ ಎಂಬ ಹೆಸರನ್ನು ಪಡೆದಿದ್ದರು. ಇವರ ಮಗ ಕಾಶಿ ಶೇಷರಾಮಶಾಸ್ತ್ರಿಗಳೂ ತಮ್ಮ ತಂದೆ, ತಾತಂದಿರಂತೆ ಮನೆಯಲ್ಲಿಯೇ ಗುರುಕುಲ ನಡೆಸುತ್ತಿದ್ದರು. ಅವರ ಬಳಿ ವೇದಾಂತವನ್ನೋದಲು ಹಲವರು ವಿದ್ಯಾರ್ಥಿಗಳು ಬರುತ್ತಿದ್ದರು. ಹಿರಿಯಣ್ಣನವರೂ ಅವರ ಸೋದರ ಎಂ. ಎನ್. ಕೃಷ್ಣರಾಯರೂ ಅವರ ವಿದ್ಯಾರ್ಥಿಗಳಾದರು. ಕಾಶಿ ಶೇಷರಾಮಶಾಸ್ತ್ರಿಗಳು ತಾವು ತೀರಿಕೊಳ್ಳುವ ಸಮಯವನ್ನು ನಲವತ್ತೆಂಟು ದಿನಗಳ ಮೊದಲೇ ತಿಳಿದುಕೊಂಡಿದ್ದರು ; ಕಡೆಗಾಲದಲ್ಲಿ ಸಂನ್ಯಾಸಿಗಳೂ ಆದರು.

ಹೀಗೆ ಹಿರಿಯಣ್ಣನವರಿಗೆ ಎಳೆತನದಲ್ಲಿಯೇ ಸಂಸ್ಕೃತದ ಸಂಸ್ಕಾರವು ಪೆರಿಯಸ್ವಾಮಿ ತಿರುಮಲಾಚಾರ್ಯರಿಂದಲೂ, ವೇದಾಂತದ ಸಂಸ್ಕಾರವು ಕಾಶಿ ಶೇಷರಾಮಶಾಸ್ತ್ರಿಗಳಿಂದಲೂ ಒದಗಿತು. ಜೊತೆ ಜೊತೆಗೆ ಇಂಗ್ಲಿಷ್ ವಿದ್ಯಾಭ್ಯಾಸವೂ ನಡೆಯಿತು. ಇತರ, ಆಗಿನ ಕಾಲದ ವಿದ್ಯಾ

ರ್ಥಿಗಳಂತೆ ಸ್ಕೂಲು, ಕಾಲೇಜುಗಳಲ್ಲಿಯೂ ಕಲಿತು ಬಿ.ಎ. ಪದವಿಯನ್ನೂ ಎಂ. ಎ. ಪದವಿಯನ್ನೂ ಪಡೆದರು. ಸ್ಕೂಲಿನ ಶಿಕ್ಷಣ ಮೈಸೂರಿನಲ್ಲಿ ಮುಗಿದನಂತರ ಮದರಾಸಿಗೆ ಹೋಗಿ ಅಲ್ಲಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ಓದನ್ನು ಮುಂದುರಿಸಿದರು.

ಮೊದಲ ಕೆಲಸಗಳು

ಹಿರಿಯಣ್ಣನವರ ಹಿರಿಯರು ಸುಮಾರಾಗಿ ಅನುಕೂಲವಾಗಿದ್ದರಷ್ಟೆ; ಅಷ್ಟೇನು ಶ್ರೀಮಂತರಲ್ಲ. ಹೀಗಾಗಿ ಅವರು ತಮ್ಮ ಹದಿನೆಂಟು–ಹತ್ತೊಂಬತ್ತನೆಯ ವಯಸ್ಸಿನಲ್ಲಿಯೇ ಕೆಲಸ ಹುಡುಕಬೇಕಾಯಿತು. ಅವರು ಬಿ. ಎ. ಮತ್ತು ಎಂ. ಎ. ಪರೀಕ್ಷೆಗಳನ್ನು ಮಾಡುವಾಗ ಪ್ರಮುಖವಾಗಿ ಓದಿದ್ದು ಸಂಸ್ಕೃತ ಮತ್ತು ಅದಕ್ಕೆ ಸಂಬಂಧಿಸಿದ ಪ್ರಾಚೀನ ಸಾಹಿತ್ಯ. ಅವರ ಒಲವು ಇದ್ದುದೂ ಅಲ್ಲಿಯೇ. ಪರೀಕ್ಷೆಗಳನ್ನು ಮದರಾಸಿನಲ್ಲಿ ಮುಗಿಸಿ ಮೈಸೂರಿಗೆ ಹಿಂದಿರುಗಿದನಂತರ ಅಲ್ಲಿನ ಓರಿಯಂಟಲ್ ಲೈಬ್ರರಿಯಲ್ಲಿ ಒಂದು ಕೆಲಸ ಸಿಕ್ಕಿತು.

ಈಗ ಮೈಸೂರಿನ ಓರಿಯಂಟಲ್ ಲೈಬ್ರರಿ ದೊಡ್ಡದೊಂದು ಸಂಶೋಧನಾ ಕೇಂದ್ರವಾಗಿ ಮೈಸೂರು ವಿಶ್ವವಿದ್ಯಾನಿಲಯದವರ ಆಡಳಿತದಲ್ಲಿದೆ. ಆದರೆ ಹಿರಿಯಣ್ಣನವರು ಅಲ್ಲಿ ಕೆಲಸಕ್ಕೆ ಸೇರಿದಾಗ ಇಷ್ಟೊಂದು ಮುಖ್ಯವಾದ ಸಂಸ್ಥೆಯಾಗಿರಲಿಲ್ಲ. ಆಗ ಭಾರತದೇಶ ಇಂಗ್ಲೀಷರ ಆಳ್ವಿಕೆಯಲ್ಲಿತ್ತಷ್ಟೆ. ವಿಕ್ಟೋರಿಯಾ ಮಹಾರಾಣಿಯು ಇಂಗ್ಲೆಂಡನ್ನು ಆಳತೊಡಗಿ ಐವತ್ತು ವರ್ಷಗಳು ಮುಗಿದಾಗ ಅದರ ಸ್ಮಾರಕಕ್ಕೆಂದು ನಮ್ಮ ದೇಶದಲ್ಲಿಯೂ ಹಲ

ವಾರು ಏರ್ಪಾಟುಗಳಾದುವು. ಇವುಗಳಲ್ಲೊಂದು ಈ ಓರಿಯಂಟಲ್ ಲೈಬ್ರರಿಯು ಸ್ಥಾಪನೆ. ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಈ ಕಡೆ ದೊರೆತ ಹಳೆಯ ಪುಸ್ತಕಗಳನ್ನೆಲ್ಲ ಸಂಗ್ರಹಿಸಿ, ಪಟ್ಟಿಮಾಡಿ, ಅವುಗಳನ್ನು ಪಂಡಿತರು ಉಪಯೋಗಿಸಿಕೊಳ್ಳುವ ಹಾಗೆ ಮಾಡುವದು ಈ ಪುಸ್ತಕ ಭಂಡಾರದ ಉದ್ದೇಶ. ೧೮೮೭ ರಲ್ಲಿ ಇದು ಮೊದಲಾಯಿತು; ಚಾಮರಾಜ ಒಡೆಯರು ಆಗ ಮೈಸೂರು ಮಹಾರಾಜರಾಗಿದ್ದು ಇದರಲ್ಲಿ ತುಂಬ ಆಸಕ್ತಿಯನ್ನು ವಹಿಸಿದರು.

ಇಂಥ ಪುಸ್ತಕ ಭಂಡಾರದಲ್ಲಿ ಹಳೆಯ, ಹರಿದುಹೋದ, ಆದರೆ ಬೆಲೆ ಬಾಳುವಂಥ ಪುಸ್ತಕಗಳೆಲ್ಲ ಇರುತ್ತವೆ. ಕೈಬರಹದ ಓಲೆಗರಿ ಪುಸ್ತಕಗಳೂ ಕಲ್ಲಚ್ಚಿನ ಪುಸ್ತಕಗಳೂ, ಅಚ್ಚಾದ ಪುಸ್ತಕಗಳೂ ಇವೆ. ಹಳ್ಳಿಗಳಿಂದ, ಹಳೆಯಕಾಲದವರ ಮನೆಗಳಿಂದ, ಮಠಗಳಿಂದ ಈ ಪುಸ್ತಕಗಳನ್ನು ಸಂಗ್ರಹಿಸಿ ಅವನ್ನು ಜೋಪಾನವಾಗಿರಿಸುವ ವ್ಯವಸ್ಥೆ ಮಾಡಿದ್ದಾರೆ ಇಲ್ಲಿ. ಆದರೆ ಅವನ್ನು ಓದುವುದು ಕಷ್ಟ, ಓದುವವರೂ ವಿರಳ. ಏಕೆಂದರೆ ಭಾಷೆ ಮಾತ್ರ ಹಳೆಯದಲ್ಲ. ಲಿಪಿಯೂ ಹಳೆಯದೇ, ಈಗ ಬಳಕೆಯಲ್ಲಿಲ್ಲದುವು. ಇಂಥ ಪುಸ್ತಕಗಳನ್ನು ಓದಿ, ಅರ್ಥ ಮಾಡಿಕೊಳ್ಳುವುದಕ್ಕೆ ಒಂದು ಬಗೆಯ ಜಾಣತನ ಬೇಕು, ಅನುಭವ ಬೇಕು.

ಹಿರಿಯಣ್ಣನವರು ಈ ಜಾಣತನವನ್ನು ಪಡೆದಿದ್ದರು, ಅನುಭವವೂ ಅವರಿಗಿದ್ದಿತು. ಸಂಸ್ಕೃತ ಭಾಷೆಯ ಮೇಲೆ ಅವರ ಹಿಡಿತ ಬಿಗಿಯಾಗಿದ್ದಿತು. ಈ ಎಲ್ಲ ಕಾರಣಗಳಿಂದ ಅವರನ್ನು ಈ ಓರಿಯಂಟಲ್ ಲೈಬ್ರರಿಯಲ್ಲಿ ಕೆಲಸಕ್ಕೆ ತೆಗೆದುಕೊಂಡರು. ಆಗ ಈ ಲೈಬ್ರರಿಯಲ್ಲಿ ಒಂದು ಸಾವಿರದ ಆರುನೂರು ಐವತ್ತುಮೂರು ಅಚ್ಚಾದ ಪುಸ್ತಕಗಳೂ

ಒಂದು ಸಾವಿರದ ಮುನ್ನೂರು ಐವತ್ತೆಂಟು ಕೈಬರಹದ ಸಂಸ್ಕೃತ-ಕನ್ನಡ ಪುಸ್ತಕಗಳೂ ಇದ್ದುವು. ಇವನ್ನೆಲ್ಲ ಓದಿ, ಆದರ ವಿಷಯಗಳನ್ನು ತಿಳಿದುಕೊಂಡು, ಪಟ್ಟಿಮಾಡಿ, ಬೇರೆ ಬೇರೆ ವಿಷಯಗಳಂತೆ ಬೇರ್ಪಡಿಸಿ ಅಚ್ಚುಕಟ್ಟಾಗಿ ಇರಿಸಿಕೊಳ್ಳುವ ಕೆಲಸ ಹಿರಿಯಣ್ಣನವರ ಪಾಲಿಗೆ ಬಂದಿತು.

ಹಿರಿಯಣ್ಣನವರು ಇಲ್ಲಿ ಕೆಲಸಕ್ಕೆ ಸೇರಿದುದು ೧೮೯೧ ರಲ್ಲಿ. ಅವರ ಕೆಲಸದ ಹೆಸರು 'ಲೈಬ್ರೇರಿಯನ್' ಎಂದು ; ಪುಸ್ತಕ ಭಂಡಾರವನ್ನು ನೋಡಿಕೊಳ್ಳುವ ಕೆಲಸ. ಇವರೊಂದಿಗೆ ಅಲ್ಲಿ ಕೆಲವರು ಪಂಡಿತರೂ ಕೆಲಸ ಮಾಡುತ್ತಿದ್ದರು. ಇವರ ಸಹವಾಸ ಹಿರಿಯಣ್ಣನವರಿಗೆ ಹಿತವೆನಿಸಿತು. ಹಳೆಯ ಪುಸ್ತಕಗಳನ್ನು ಓದುವ ಅವಕಾಶವೂ ದೊರಕಿತು. ವಿದ್ಯೆಯ ವಿಚಾರದಲ್ಲಿ ಮೊದಲೇ ಗೌರವವಿದ್ದ ಇವರಿಗೆ ಇಲ್ಲಿ ಕೆಲಸ ಮಾಡಿದ ಮೇಲೆ ವಿದ್ಯೆಯ ಬಗ್ಗೆ ಭಕ್ತಿ ಬೆಳೆಯಿತು. ಮುಂದೆ ಅವರಲ್ಲಿ ಬೆಳೆದ ಪಾಂಡಿತ್ಯಕ್ಕೆ ಇದು ಬುನಾದಿಯಾಯಿತು. ಆದರೆ ಇಲ್ಲಿ ದೊರೆಯುತ್ತಿದ್ದ ಸಂಬಳ ಸಣ್ಣದು, ತೀರ ಸ್ವಲ್ಪ. ಬದುಕಿಗೆ ಸಾಕಾಗುವಂತಿರಲಿಲ್ಲ. ಅದೂ ಅಲ್ಲದೆ ಅಷ್ಟು ವಿದ್ಯೆ ಕಲಿತವರಿಗೆ ಅದನ್ನು ಕಲಿಸುವ ಬಯಕೆಯೂ ಇರುತ್ತದೆ. ಹಿರಿಯಣ್ಣನವರು ಉಪಾಧ್ಯಾಯ ವೃತ್ತಿ ಹಿಡಿಯಬೇಕೆಂದಿದ್ದರು.

ಓರಿಯಂಟಲ್ ಲೈಬ್ರರಿಯಲ್ಲಿ ಒಂದು ವರ್ಷ ಕೆಲಸ ಮಾಡಿದ್ದರೋ ಇಲ್ಲವೋ, ಬೆಂಗಳೂರಿನ ಶಿಕ್ಷಣಕಾರ್ಯದರ್ಶಿಯ ಕಚೇರಿಯಲ್ಲಿ ಗುಮಾಸ್ತೆಯ ಕೆಲಸ ತೆರವಾಗಿದ್ದುದು ತಿಳಿದು ಬಂದಿತು. ರಾಜಧಾನಿ ಮೈಸೂರೇ ಆಗಿದ್ದರೂ, ಸರ್ಕಾರದ ಕೆಲಸವೆಲ್ಲ ಬೆಂಗಳೂರಿನಿಂದಲೇ ನಡೆಯುತ್ತಿತ್ತು. ಸರ್ಕಾರದ ಇಲಾಖೆಗಳೆಲ್ಲ ಬೆಂಗಳೂರಿನಲ್ಲಿಯೇ

ಇದ್ದುವು. ಆಗ ಇಲಾಖೆಗಳ ಮುಖ್ಯಾಧಿಕಾರಿಗಳು ಸಾಮಾನ್ಯವಾಗಿ ಬ್ರಿಟಿಷರೇ ಇರುತ್ತಿದ್ದರು. ಚಾಮರಾಜ ಒಡೆಯರು ಮಹಾರಾಜರಾಗಿದ್ದ ಕಾಲ ಅದು; ಆಡಳಿತಕ್ಕೆ ಕೊಂಚ ಹಣದ ಕೊರತೆಯಿದ್ದಿತು. ಪ್ರತ್ಯೇಕವಾದ ಶಿಕ್ಷಣ ಇಲಾಖೆಯಿದ್ದುದನ್ನು ತೆಗೆದು ಅದರ ಆಡಳಿತವನ್ನೆಲ್ಲ 'ದಿವಾನರಿಗೆ ಶಿಕ್ಷಣ ಕಾರ್ಯದರ್ಶಿ' ಎಂಬಾತನೇ ನೋಡಿಕೊಳ್ಳುವಂತೆ ಏರ್ಪಡಿಸಿದ್ದರು. ಆಗ ದಿವಾನರಾಗಿದ್ದವರು ಸರ್ ಕೆ. ಶೇಷಾದ್ರಿ ಅಯ್ಯರ್ ಅವರು; ಶಿಕ್ಷಣ ಕಾರ್ಯದರ್ಶಿ ಎಚ್. ಜೆ. ಭಾಭಾ ಎಂಬ ಪಾರ್ಸಿ ಮಹನೀಯ.

ಶಿಕ್ಷಣ ಕಾರ್ಯದರ್ಶಿಯ ಕಚೇರಿಯಲ್ಲಿ ಹಿರಿಯಣ್ಣನವರು ಮುಖ್ಯ ಗುಮಾಸ್ತೆ (ಹೆಡ್ ಕ್ಲರ್ಕ್) ಯಾಗಿ ಕೆಲಸಕ್ಕೆ ಸೇರಿ ಮೂರು ವರ್ಷಗಳು ಬೆಂಗಳೂರಿನಲ್ಲಿಯೇ ಇದ್ದರು. ಇಷ್ಟರಲ್ಲಿ ಅವರು ಅಧ್ಯಾಪಕರಾಗುವ ಬಯಕೆ ಬಲವಾಗಿ

ಅದಕ್ಕೆ ಅಗತ್ಯವಾದ ಶಿಕ್ಷಣವನ್ನು ಪಡೆದುಕೊಳ್ಳುವ ಮನಸ್ಸು ಮಾಡಿದರು. ಅಧ್ಯಾಪಕರಿಗೆ ಶಿಕ್ಷಣ ಆ ಕಾಲದಲ್ಲಿ ಮದ್ರಾಸಿನಲ್ಲಿ ಮಾತ್ರ ದೊರೆಯುತ್ತಿತ್ತು. ಅಷ್ಟು ದೂರ ತಾವಾಗಿ ಹೋಗಿ, ಅಲ್ಲಿ ಒಂದು ವರ್ಷ ಇರುವಷ್ಟು ಹಣದ ಅನುಕೂಲ ಹಿರಿಯಣ್ಣನವರಿಗೆ ಇರಲಿಲ್ಲ. ಆದರೆ ಅವರು ಶಿಕ್ಷಣ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಬಗೆಯನ್ನು ಗಮನಿಸಿದ್ದ ಅಧಿಕಾರಿಗಳು, ಅವರ ದಕ್ಷತೆ, ಜಾಣತನ, ಪ್ರಾಮಾಣಿಕತೆಗಳಿಗೆ ಮೆಚ್ಚಿಕೊಂಡು ಅವರಿಗೆ ಒಂದು ವರ್ಷದ ವಿದ್ಯಾರ್ಥಿವೇತನ (ಸ್ಕಾಲರ್ ಶಿಪ್) ಕೊಡುವಂತೆ ಸರ್ಕಾರಕ್ಕೆ ಶಿಫಾರಸು ಮಾಡಿದರು. ಸರ್ಕಾರವೂ ಒಪ್ಪಿಕೊಂಡು ಅವರನ್ನು ಮದ್ರಾಸಿಗೆ ಕಳುಹಿಸಿಕೊಟ್ಟಿತು.

ಮದ್ರಾಸಿನಲ್ಲಿ ಸೈದಾಪೇಟೆಯ 'ಟೀಚರ್ಸ್ ಕಾಲೇಜ್' ಆ ಕಾಲಕ್ಕೆ ಅಧ್ಯಾಪಕರ ತರಪೇತಿಗೆ, ಶಿಕ್ಷಕರ ಶಿಕ್ಷಣಕ್ಕೆ ಪ್ರಸಿದ್ಧವಾಗಿದ್ದ ಸಂಸ್ಥೆ. ಹಿರಿಯಣ್ಣನವರು ಈ ಕಾಲೇಜಿಗೆ ಸೇರಿ, ಒಂದು ವರ್ಷ ಓದಿ, ಎಲ್.ಟಿ. ಪರೀಕ್ಷೆಯಲ್ಲಿ ತೇರ್ಗಡೆಯಾದರು. ಇದರಿಂದಾಗಿ ಸರ್ಕಾರದ ಶಾಲೆಗಳಲ್ಲಿ ಶಿಕ್ಷಕರಾಗುವ ಅರ್ಹತೆಯನ್ನು ಪಡೆದರು.

ಅನಂತರ ಮೈಸೂರಿಗೆ ಹಿಂದಿರುಗಿ ಅಲ್ಲಿನ ಸರ್ಕಾರಿ ನಾರ್ಮಲ್ ಸ್ಕೂಲ್ (ಪ್ರೌಢಶಾಲೆ) ನಲ್ಲಿ ಉಪಾಧ್ಯಾಯರಾಗಿ ಸೇರಿದರು. ಅವರು ಈ ಶಾಲೆಗೆ ಸೇರಿದ ವರ್ಷ ೧೮೯೬. ಹನ್ನೊಂದು ವರ್ಷಗಳು ಹುಡುಗರಿಗೆ ಗಣಿತ, ಭೂಗೋಳ ಮೊದಲಾದ ಪಾಠವನ್ನು ಹೇಳಿದ ಮೇಲೆ, ೧೯೦೭ ರಲ್ಲಿ ಶಾಲೆಯ ಮುಖ್ಯೋಪಾಧ್ಯಾಯರಾದರು. ಈ ಶಾಲೆಯೇ ಮುಂದೆ 'ಟ್ರೇನಿಂಗ್ ಕಾಲೇಜ್' ಆಗಿ ಮಾರ್ಪಟ್ಟಿತು. ಹಿರಿಯಣ್ಣನವರು ಅಲ್ಲಿ ದುಡಿದ ಫಲವಾಗಿ ಶಾಲೆ ಪ್ರಸಿದ್ಧ

ವಾಯಿತು. ಅವರು ಯಾವ ಕೆಲಸವನ್ನು ಹಿಡಿದರೂ ಚೆನ್ನಾಗಿಯೇ ಮಾಡುವವರು. ತರಗತಿಯಲ್ಲಿ ಪಾಠ ಹೇಳುವಾಗಲೂ, ಶಾಲೆಯ ಆಡಳಿತವನ್ನು ನಡೆಸುವಾಗಲೂ ಒಂದೇ ಅಚ್ಚುಕಟ್ಟು. ಈ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ಶಿಕ್ಷಣ ವಿಧಾನವನ್ನು ಕುರಿತು ಕನ್ನಡದಲ್ಲಿ ಒಂದು ಪುಸ್ತಕವನ್ನು ಬರೆದರು. ಅವರ ಹೆಸರನ್ನು ಬೆಳಕಿಗೆ ತಂದ ಬರಹಗಳೆಲ್ಲ ಇಂಗ್ಲೀಷಿನವೇ ಆದರೂ, ಅವರು ಮೊದಲು ಬರೆದ ಪುಸ್ತಕ ತಮ್ಮ ತಾಯ್ನುಡಿಯಾದ ಕನ್ನಡದಲ್ಲಿಯೇ. ಇವರು ಇದಲ್ಲದೆ ಇನ್ನೂ ಕೆಲವು ಸಣ್ಣ ಪುಸ್ತಕಗಳನ್ನು ಕನ್ನಡದಲ್ಲಿ ಬರೆದರಂತೆ.

ನಾರ್ಮಲ್ ಸ್ಕೂಲಿನ ಮುಖ್ಯೋಪಾಧ್ಯಾಯರಾಗಿ ಐದು ವರ್ಷ ಕೆಲಸ ಮಾಡಿದರು. ಅನಂತರ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ವಿಭಾಗದ ಅಧ್ಯಾಪಕರಾಗಿ ಸೇರಿದುದು ಅವರ ಬದುಕಿನಲ್ಲಿ ಮುಖ್ಯವಾದ ಘಟ್ಟ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ

ಮೈಸೂರು ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ೧೮೭೪ ರಷ್ಟು ಹಿಂದೆಯೇ 'ರಾಜಾಸ್ ಸ್ಕೂಲ್' ಆರಂಭವಾಗಿ ಕ್ರಮೇಣ ಅದು ಮಹಾರಾಜಾ ಕಾಲೇಜಾಗಿ ಬೆಳೆಯಿತು. ಇದರ ಮೊದಲ ಮುಖ್ಯಸ್ಥ ಎಚ್. ಜೆ. ಭಾಭಾ ಎಂಬುವವನು ; ಪಾರ್ಸಿ ಜನಾಂಗಕ್ಕೆ ಸೇರಿದ ಈತನು ಶಿಕ್ಷಣ ಕ್ಷೇತ್ರದಲ್ಲಿ ತುಂಬ ದಕ್ಷನಾದ ಅಧಿಕಾರಿ. 'ರಾಜಾಸ್ ಸ್ಕೂಲ'ನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸಿ ಅದು ಮೊದಲನೆಯ ದರ್ಜೆ ಕಾಲೇಜಾಗಿ ಮಾರ್ಪಡುವುದಕ್ಕೆ ಇವನೇ ಕಾರಣ. ಕಾಲೇಜಾದ

ಮೇಲೆ ಅದು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿತು. ಆಗ ಮೈಸೂರಿಗೇ ಬೇರೆ ವಿಶ್ವವಿದ್ಯಾನಿಲಯ ಇರಲಿಲ್ಲ. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತರವನ್ನು ಇಂಗ್ಲೀಷಿನಲ್ಲಿಯೇ ಬರೆಯಬೇಕಾಗಿದ್ದಿತು; ಕಾಲೇಜಿನ ಅಧ್ಯಾಪಕರೂ ಇಂಗ್ಲೀಷ್ ಬಲ್ಲವರೇ ಆಗಿದ್ದರು. ಏಕೆಂದರೆ ಪರೀಕ್ಷೆ ನಡೆಯುತ್ತಿದ್ದುದು ಮದ್ರಾಸಿನಲ್ಲಿ. ೧೮೯೯ ರಲ್ಲಿ ಮಹಾರಾಜಾ ಕಾಲೇಜು ಪ್ರಥಮದರ್ಜೆ ಕಾಲೇಜಾಗಿ ಮೈದಳೆಯಿತು.

ಆಗ ಅದರ ಮುಖ್ಯಸ್ಥರಾಗಿದ್ದವರು ಆಂಗ್ಲ ಅಧಿಕಾರಿಗಳೇ. ಹಿರಿಯಣ್ಣನವರು ೧೯೧೨ ರಲ್ಲಿ ಈ ಕಾಲೇಜಿಗೆ ಸಂಸ್ಕೃತ ಅಧ್ಯಾಪಕರಾಗಿ ಸೇರಿಕೊಂಡಾಗ ಟಿ. ಡೆನ್ಹಾಂ ಎಂಬಾತ ಪ್ರಿನ್ಸಿಪಲ್ ಆಗಿದ್ದ. ನಾರ್ಮಲ್ ಸ್ಕೂಲಿನಲ್ಲಿ ಆಗಲೇ ಯಶಸ್ಸು ಗಳಿಸಿದ್ದ ಹಿರಿಯಣ್ಣನವರ ವಿಚಾರವಾಗಿ ಈತನಿಗೆ ತುಂಬ ಗೌರವವಿದ್ದಿತು. ಶಿಕ್ಷಣ ಕಾರ್ಯದರ್ಶಿಯಾಗಿದ್ದ ಭಾಭಾ ಕೂಡ ಇವರ ಪಾಂಡಿತ್ಯದ ಬಗ್ಗೆ ಮತ್ತು ಪ್ರಾಮಾಣಿಕತೆಯ ಬಗ್ಗೆ ಮೆಚ್ಚುಗೆಯನ್ನು ತೋರಿಸಿದ್ದರು. ಡೆನ್ಹಾಂ ನಂತರ ಪ್ರಿನ್ಸಿಪಲ್ ಆದವರು ನಮ್ಮವರೇ ಆದ ಬಿ. ಎಂ. ಶ್ರೀಕಂಠಯ್ಯನವರು. ಕನ್ನಡನಾಡಿನಲ್ಲಿ ಇವರ ಹೆಸರನ್ನು ಕೇಳದವರು ಯಾರು ? ಕನ್ನಡಕ್ಕೆ ಮಾಡಿದ ಸೇವೆಯನ್ನು ನೆನೆಸಿಕೊಳ್ಳದವರು ಯಾರು ? ಇವರು ೧೯೧೯ ರಲ್ಲಿ ಪ್ರಿನ್ಸಿಪಲ್ಆದರು. ಹಿರಿಯಣ್ಣನವರಯೋಗ್ಯತೆಯನ್ನು ಕಂಡುಕೊಳ್ಳಲು ಇವರಿಗೇನೂ ಕಷ್ಟವಾಗಲಿಲ್ಲ.

ಮೈಸೂರು ವಿಶ್ವವಿದ್ಯಾನಿಲಯ ಮೈದಳೆದಾಗ ಅದರ ಮೊಟ್ಟಮೊದಲನೆಯ ಮುಖ್ಯಸ್ಥರು ಎಂದರೆ ವೈಸ್ ಚಾನ್ಸಲರ್, ಆಗಿದ್ದವರು ಎಚ್. ವಿ. ನಂಜುಂಡಯ್ಯನೆಂಬುವರು. ಮೊದಲು ಅವರು ಹೈಕೋರ್ಟಿನ ಜಡ್ಜ್ ಆಗಿದ್ದ

ವರು, ಸರ್ಕಾರದ ಸಮಿತಿ(ಸ್ಟೇಟ್ ಕೌನ್ಸಿಲ್)ಯ ಸದಸ್ಯರಾಗಿದ್ದವರು, ಸರ್ಕಾರಕ್ಕೆ ಕಾರ್ಯದರ್ಶಿಯಾಗಿದ್ದವರು. ಬಹಳ ದಕ್ಷರಾದ ಅಧಿಕಾರಿಗಳು; ಪಂಡಿತರೂ ಹೌದು. ವಿಶ್ವವಿದ್ಯಾನಿಲಯ ಆರಂಭವಾದಾಗ ಅಲ್ಲಿನ ಮುಖ್ಯಸ್ಥಾನಗಳಿಗೆ ಯಾರು ಯಾರನ್ನು ನಿಯಮಿಸಿದರೆ ಒಳ್ಳೆಯದು ಎಂದು ಆಲೋಚಿಸಿ, ದೇಶದಲ್ಲೆಲ್ಲ ಉತ್ತಮರಾದವರನ್ನೇ ಕರೆಯಿಸಿಕೊಂಡರು. ವಿಶ್ವವಿದ್ಯಾನಿಲಯ ಆರಂಭವಾಗುವುದಕ್ಕೆ ಮೊದಲೂ ಮಹಾರಾಜಾ ಕಾಲೇಜಿನಲ್ಲಿ ಉತ್ತಮರಾದ ಅಧ್ಯಾಪಕರಿರಬೇಕು ಎಂದು ಅವರು ನಿರ್ಧರಿಸಿದ್ದರು. ಹಿರಿಯಣ್ಣರನ್ನು ಮಹಾರಾಜಾ ಕಾಲೇಜಿಗೆ ತೆಗೆದುಕೊಂಡವರು ಇವರೇ.

ಹಿರಿಯಣ್ಣನವರೇನು ಆ ಕೆಲಸಕ್ಕೆ ಅರ್ಜಿ ಹಾಕಿಕೊಂಡಿರಲಿಲ್ಲ. ತಮ್ಮ ಗುಣಗಳನ್ನು ಹೇಳಿಕೊಂಡು, ಅಧಿಕಾರಿಗಳನ್ನು ಆಶ್ರಯಿಸಿ ಅವರ ಸ್ತೋತ್ರಮಾಡಿ, ಕೆಲಸ ಗಿಟ್ಟಿಸುವ, ಪ್ರಯೋಜನ ಪಡೆಯುವ ಸ್ವಭಾವದವರಲ್ಲ ಹಿರಿಯಣ್ಣನವರು. ತಮ್ಮ ಪಾಲಿಗೆ ಬಂದ ಕೆಲಸವನ್ನು ಗದ್ದಲವಿಲ್ಲದೆ ಮಾಡಿಕೊಂಡು ಹೋಗುವವರು ಅವರು ; ಮೇಲೆ ನುಗ್ಗಿ ಹೆಚ್ಚಿನ ಹುದ್ದೆಗಳಿಗೆ ಬಾಯಿ ಬಿಡುವವರಲ್ಲ. ಇವರು ಹೀಗಿದ್ದರೂ ನಂಜುಂಡಯ್ಯನವರು ಇವರ ಯೋಗ್ಯತೆಯನ್ನು ಗಮನಿಸಿದ್ದರು; ಇವರು ಅರ್ಜಿ ಹಾಕಿಕೊಳ್ಳದಿದ್ದರೂ ಕೆಲಸಕ್ಕೆ ಆಸೆ ಪಡದಿದ್ದರೂ ಇವರನ್ನು ಕಾಲೇಜಿಗೆ ತೆಗೆದುಕೊಳ್ಳಬೇಕೆಂದು ಬರೆದರು. ಇವರಿಂದ ಕಾಲೇಜಿಗೆ ಕೀರ್ತಿ ಬರುತ್ತದೆ ಎನ್ನುವ ಭರವಸೆ ಅವರಿಗಿದ್ದಿತು.

ಈ ಕಾಲೇಜಿನಲ್ಲಿ ಸಂಸ್ಕೃತ ಕಲಿಸುತ್ತಿದ್ದವರೆಲ್ಲ ಹಿರಿಯ ಪಂಡಿತರೇ. ಮೊದಲನೆಯವರು ಹಿರಿಯಣ್ಣನವರ ಗುರುಗಳೇ ಆಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯರು.

ಅವರು ಆರಂಭಿಸಿದ ಸದ್ವಿದ್ಯಾ ಪಾಠಶಾಲೆಯ ಪ್ರಸ್ತಾಪ ಆಗಲೇ ಬಂದಿತಷ್ಟೆ. ಇವರು ೧೮೯೯ರ ಮೇ ೨೪ ರಂದು ತೀರಿಕೊಳ್ಳಲು 'ಆಸ್ಥಾನ ವಿದ್ವಾನ್, ಕವಿರತ್ನ' ಮಂಡೀ ಕಲ್ಲು ರಾಮಶಾಸ್ತ್ರಿಗಳು ಅಧ್ಯಾಪಕರಾದರು; ಇದಕ್ಕೆ ಮೊದಲು ಇವರು ಮೈಸೂರಿನ ಶಾರದಾವಿಲಾಸ ಪಾಠ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದವರು. ಇವರೂ ದೊಡ್ಡ ಪಂಡಿತರು, ಸೊಗಸಾದ ಕವಿತೆಗಳನ್ನು ಬರೆಯು ತ್ತಿದ್ದರು. ಇವರಾದ ಮೇಲೆ ಕಸ್ತೂರಿರಂಗ ಅಯ್ಯಂಗಾರ್ಯ ರೆಂಬುವವರು ೧೯೦೮ರ ವರೆಗೂ ಈ ಕಾಲೇಜಿನಲ್ಲಿ ಸಂಸ್ಕೃತ ವನ್ನು ಕಲಿಸುತ್ತಿದ್ದರು. ಅಲ್ಲಿಂದ ಮುಂದೆ ೧೯೧೨ ರ ವರೆಗೂ ವೆಂಕಟರಾಮಶಾಸ್ತ್ರಿಗಳೆಂಬ ಘನವಿದ್ವಾಂಸರು ಅಧ್ಯಾಪಕರಾಗಿದ್ದರು. ಇವರು ತೆರವು ಮಾಡಿಕೊಟ್ಟ ಸ್ಥಾನ ದಲ್ಲಿಯೇ ಹಿರಿಯಣ್ಣನವರು ಸೇರಿಕೊಂಡುದು. ಎರಡು ವರ್ಷಗಳ ನಂತರ ಹಿರಿಯಣ್ಣನವರು ಅಸಿಸ್ಟೆಂಟ್ ಪ್ರೊಫೆ ಸರ್ ಆಗಿ ನೇಮಕಗೊಂಡಾಗ, ಅವರ ಸ್ಥಾನಕ್ಕೆ ಬಂದವರು ಡಿ. ಶ್ರೀನಿವಾಸಾಚಾರ್ಯರೆಂಬ ವಿದ್ವಾಂಸರು.

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದ ದಿವಾನರಾಗಿದ್ದಾಗ ೧೯೧೬ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯವನ್ನು ಏರ್ಪಡಿಸುವ ಯೋಜನೆ ಯೊಂದನ್ನು ಸಿದ್ಧಪಡಿಸಿದರು. ಅವರೆಗೆ ಬೆಂಗಳೂರಿನಲ್ಲಿದ್ದ ಸೆಂಟ್ರಲ್ ಕಾಲೇಜ್ ಮತ್ತು ಮೈಸೂರಿನಲ್ಲಿದ್ದ ಮಹಾ ರಾಜಾ ಕಾಲೇಜ್ ಎರಡೂ ಮದ್ರಾಸ್ ವಿಶ್ವವಿದ್ಯಾನಿಲ ಯಕ್ಕೇ ಸೇರಿದ್ದುವು; ಪರೀಕ್ಷೆಗಳೆಲ್ಲ ಅಲ್ಲೇ ನಡೆಯಬೇಕಾಗಿ ದ್ದಿತು. ಹೊಸ ಯೋಜನೆಯ ಪ್ರಕಾರ ಮೈಸೂರು ತನ್ನದೇ ಆದ ವಿಶ್ವವಿದ್ಯಾನಿಲಯವನ್ನು ಪಡೆಯಿತು. ಮೊದಲನೆಯ

ಉಪಕುಲಪತಿ (ವೈಸ್ ಚಾನ್ಸಲರ್) ಮೇಲೆ ಹೇಳಿದ ಎಚ್. ವಿ. ನಂಜುಂಡಯ್ಯನವರು. ಆಗ ಮಹಾರಾಜಾ ಕಾಲೇಜಿಗೆ ಪ್ರಿನ್ಸಿಪಲ್ ಆದವರು ಡಾ. ಕಟ್ಟಮಂಚಿ ರಾಮಲಿಂಗರೆಡ್ಡಿ (ಸಿ.ಆರ್.ರೆಡ್ಡಿ) ಎಂಬ ಮಹನೀಯರು; ಅವರ ತರುವಾಯ ಕನ್ನಡಿಗರೇ ಆದ, ಅರ್ಥಶಾಸ್ತ್ರ ನಿಪುಣರಾದ ಎಸ್. ಎಸ್. ಸುಬ್ಬರಾಯರು ಪ್ರಿನ್ಸಿಪಲ್ (೧೯೧೭-೧೯೨೮) ಆದರು. ಹಿರಿಯಣ್ಣನವರು ಮಹಾರಾಜಾ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ಇವರಿಬ್ಬರೂ ಮುಖ್ಯಸ್ಥರಾಗಿದ್ದರು.

ಆಗ ತತ್ತ್ವಶಾಸ್ತ್ರ ವಿಭಾಗ ಚೆನ್ನಾಗಿ ಮೈದಳೆಯಿತು. ಡಾ|| ಸರ್ವೆಪಲ್ಲಿ ರಾಧಾಕೃಷ್ಣನ್ ಅವರ ಹೆಸರನ್ನು ಕೇಳಿದ್ದೀರಲ್ಲವೆ? ವಿಶ್ವವಿಖ್ಯಾತರಾದ ಮೇಧಾವಿಗಳು ಅವರು; ನಮ್ಮ ದೇಶದ ರಾಷ್ಟ್ರಪತಿಯೂ ಆಗಿದ್ದು ಈಗ ವಿಶ್ರಾಂತರಾಗಿದ್ದಾರೆ. ಅವರು ತತ್ತ್ವಶಾಸ್ತ್ರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದರು. ಹಿರಿಯಣ್ಣನವರು ಸಂಸ್ಕೃತ ಅಧ್ಯಾಪಕರಾದರೂ ತತ್ತ್ವಶಾಸ್ತ್ರ ವಿಭಾಗದಲ್ಲಿ ಪಾಠ ಹೇಳುತ್ತಿದ್ದರು; ಅವರ ವಿಷಯ ಭಾರತೀಯ ತತ್ತ್ವಶಾಸ್ತ್ರ. ಜೊತೆಗೆ ಎ. ಆರ್. ವಾಡಿಯಾ ಎಂಬ ವಿದ್ವಾಂಸರೂ ಅದೇ ವಿಭಾಗದಲ್ಲಿದ್ದರು. ರಾಧಾಕೃಷ್ಣನ್ ಅವರಿಗೂ ವಾಡಿಯಾ ಅವರಿಗೂ ಹಿರಿಯಣ್ಣನೆಂದರೆ ತುಂಬ ಗೌರವ. ಇದು ೧೯೧೯-೧೯೨೦ ರ ಮಾತು. ಆಗ ರಾಧಾಕೃಷ್ಣನ್ ಅವರೂ ಹಿರಿಯಣ್ಣನವರೂ ಸಹೋದ್ಯೋಗಿಗಳಾಗಿದ್ದು ಭಾರತೀಯ ದರ್ಶನಗಳ ಬಗ್ಗೆ ಬರೆಯಲಾರಂಭಿಸಿದರು.

ಹಿರಿಯಣ್ಣನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿದ್ದ ಕಾಲ ಆ ವಿಶ್ವವಿದ್ಯಾನಿಲಯದ ಸುವರ್ಣಯುಗ ಎನ್ನಬೇಕು. ಆಗ ಹಿರಿಯಣ್ಣನವರಂಥವರೇ ಹತ್ತಾರು

ಮಂದಿ ವಿಖ್ಯಾತ ವಿದ್ವಾಂಸರು ಅಲ್ಲಿ ಪಾಠ ಹೇಳುತ್ತಿದ್ದರು. ವಿದ್ಯಾನಿಲಯದ ಉಪಕುಲಪತಿಗಳು ಡಾ|| ವ್ರಜೇಂದ್ರ ನಾಥ ಶೀಲರು. ಅವರನ್ನು ಜನ 'ನಡೆದಾಡುವ ವಿಶ್ವಕೋಶ' ಎಂದು ಕರೆಯುತ್ತಿದ್ದರು. ಅಷ್ಟೊಂದು ಅವರ ಜ್ಞಾನ ಎಲ್ಲ ವಿಷಯಗಳಲ್ಲಿಯೂ. ಸಭೆಯಲ್ಲಿ ಮಾತನಾಡಲು ನಿಂತ ರಂತೂ ಗಂಗಾಪ್ರವಾಹದಂತೆ ಎಡೆಬಿಡದೆ ಮಾತು ಹೊರ ಹೊಮ್ಮುತ್ತಿದ್ದಿತು. ಅನೇಕ ಪುಸ್ತಕಗಳನ್ನೂ ಬರೆದಿದ್ದಾರೆ ಅವರು. ಇತಿಹಾಸ ವಿಭಾಗದಲ್ಲಿ ಹಾಗೆಯೇ ಇನ್ನೊಬ್ಬರು ಹೆಸರಾಂತ ಪಂಡಿತರಿದ್ದರು — ಡಾ. ರಾಧಾಕುಮುದ ಮುಖರ್ಜಿ; ಇವರೂ ಭಾರತದಲ್ಲೆಲ್ಲ ಪ್ರಸಿದ್ಧ ವಿದ್ವಾಂಸರು, ಲೇಖಕರು, ಇವರಿಬ್ಬರೂ ಬಂಗಾಳದವರಾದರೂ ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕೆಲಸಮಾಡಿ ಆದರ ಹೆಸರಿಗೆ ಕಾರಣರಾದರು. ಅರ್ಥಶಾಸ್ತ್ರವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ. ಕೆ. ಟಿ. ಶಾ ಕೂಡ ಸುಪ್ರಸಿದ್ಧರಾಗಿದ್ದವರೇ. ಇನ್ನು ತತ್ತ್ವಶಾಸ್ತ್ರ ವಿಭಾಗದಲ್ಲಿ ಡಾ. ಎಸ್. ರಾಧಾಕೃಷ್ಣನ್ ಮತ್ತು ಪ್ರೊ. ಎ. ಆರ್. ವಾಡಿಯಾ; ಸಂಸ್ಕೃತ ವಿಭಾಗ ದಲ್ಲಿ ಹಿರಿಯಣ್ಣನವರಲ್ಲದೆ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು, ಕನ್ನಡದಲ್ಲಿ ಕರಿಬಸವಪ್ಪಶಾಸ್ತ್ರಿ ಗಳು, ಬಿ. ಎಂ. ಶ್ರೀಕಂಠಯ್ಯನವರು, ಟಿ. ಎಸ್. ವೆಂಕಣ್ಣಯ್ಯನವರು, ತೆಲುಗಿಗೆ ಪಂಡಿತ ರಾಳ್ಲಪಲ್ಲಿ ಅನಂತ ಕೃಷ್ಣಶರ್ಮರು—ಎಲ್ಲರೂ ವಿದ್ಯೆಯಲ್ಲಿ ಅತಿರಥ—ಮಹಾ ರಥರೇ. ಇಂಥ ಅಧ್ಯಾಪಕರಿರುವುದು ವಿದ್ಯಾರ್ಥಿಗಳ ಭಾಗ್ಯವಲ್ಲವೆ? ಇವರೆಲ್ಲರ ನಡುವೆ ಹಿರಿಯಣ್ಣನವರು ಋಷಿ ಯಂತೆ, ಎಲ್ಲರಿಂದಲೂ ಗೌರವ ಪಡೆದು, ಇರುತ್ತಿದ್ದರು.

ಸಂಸ್ಕೃತ ಅಧ್ಯಾಪಕರಾಗಿ ಅವರು ಮಹಾರಾಜಾ

ಕಾಲೇಜನ್ನು ಸೇರಿದ್ದು ೧೯೧೨ ರಲ್ಲಿ; ಎರಡು ವರ್ಷಗಳ ನಂತರ ಉಪ–ಪ್ರಾಧ್ಯಾಪಕರು(ಎಂದರೆ ಅಸಿಸ್ಟೆಂಟ್ ಪ್ರೊಫೆಸರ್)ಆದರು. ಇದಾದ ನಾಲ್ಕು ವರ್ಷಗಳ ನಂತರ, ಎಂದರೆ ೧೯೧೮ ರಲ್ಲಿ, ಅವರು ಸಂಸ್ಕೃತ ವಿಭಾಗದ ಮುಖ್ಯಸ್ಥರು (ಪ್ರಾಧ್ಯಾಪಕರು, ಪ್ರೊಫೆಸರ್) ಆಗಿ ನೇಮಕಗೊಂಡರು. ಮುಂದೆ ಒಂಬತ್ತು ವರ್ಷಗಳು ಈ ಕೆಲಸ ಮಾಡಿ ೧೯೨೭ ರಲ್ಲಿ ನಿವೃತ್ತರಾದರು. ಆಗ ಅವರಿಗೆ ಐವತ್ತಾರು ವರ್ಷ ವಯಸ್ಸು.

ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ನಿವೃತ್ತರಾಗುವ ವಯಸ್ಸೇನಲ್ಲ ಅದು; ಅದೂ ಹಿರಿಯಣ್ಣನವರಂಥ ವಿದ್ವಾಂಸರನ್ನು, ಪ್ರಸಿದ್ಧರನ್ನು ವಿಶ್ವವಿದ್ಯಾನಿಲಯ ಬಿಡುತ್ತದೆಯೆ ? ಆದರೆ ಹಿರಿಯಣ್ಣನವರು ತಾವಾಗಿ ನಿವೃತ್ತರಾಗುವ ಬಯಕೆಯನ್ನು ವ್ಯಕ್ತಪಡಿಸಿ, ಯಾರ ಬಲವಂತಕ್ಕೂ ಮಣಿಯದೆ ವಿಶ್ರಾಂತರಾದರು. ವಿಶ್ವವಿದ್ಯಾನಿಲಯದ ಆಗಿನ ಅಧಿಕಾರವರ್ಗ ಅವರ ವಿಚಾರದಲ್ಲಿ ನಡೆದುಕೊಂಡ ಬಗೆ ಅವರಿಗೆ ಸರಿಯೆನಿಸಲಿಲ್ಲವೆಂದೂ, ತಮ್ಮ ಆತ್ಮಗೌರವಕ್ಕೆ ಕುಂದು ಬಂದ ಕಡೆ ತಾವು ಕೆಲಸ ಮಾಡುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದರೆಂದೂ ಮಾತುಕೇಳಿಬಂದಿತು. ಹಿರಿಯಣ್ಣನವರೇನೋ ಈ ಪ್ರಸಂಗವನ್ನು ದೊಡ್ಡದು ಮಾಡಲಿಲ್ಲ; ಅದರ ಬಗ್ಗೆ ಮತ್ತೆ ಯೋಚನೆಯನ್ನೂ ಮಾಡಲಿಲ್ಲ.

ಕಡೆಯ ದಿನಗಳು

ಬಹುಮಂದಿಗೆ ಕೆಲಸದಿಂದ ನಿವೃತ್ತರಾದರೆಂದರೆ ಕಡೆಯ ದಿನಗಳೆಂದೇ ಅರ್ಥ; ಬದುಕಿನ ಪ್ರಯೋಜನವೆಲ್ಲ

ಮುಗಿಯಿತೆಂದೂ, ಇನ್ನು ಅವರು ಮಾಡಬೇಕಾದುದು ಏನೂ ಇಲ್ಲವೆಂದೂ, ಅಥವಾ ಉಪಯುಕ್ತವಾದ ಯಾವ ಕೆಲಸವನ್ನು ಮಾಡಲೂ ಅವರು ಶಕ್ತರಲ್ಲವೆಂದೂ ತಿಳಿಯು ತ್ತೇವಲ್ಲವೆ? ಆದರೆ ಹಿರಿಯಣ್ಣನವರ ವಿಚಾರದಲ್ಲಿ ಹೀಗಾ ಗಲಿಲ್ಲ. ಕಾಲೇಜಿನ ಕೆಲಸದಿಂದ ನಿವೃತ್ತರಾದಮೇಲೆ ಅವರು ತಮ್ಮ ಬರಹಗಳತ್ತ ಗಮನ ಹರಿಸಿದ್ದು. ಮೊದಲು ಅವರು ಬರೆಯುತ್ತಿರಲಿಲ್ಲವೆಂದಲ್ಲ; ಕೆಲವಾರು ಉಪನಿಷತ್ತುಗಳನ್ನು ಆಗಲೇ ಅವರು ಇಂಗ್ಲೀಷಿಗೆ ಅನುವಾದ ಮಾಡಿದ್ದರು. ಆದರೆ ಅವರ ಹೆಸರನ್ನು ತಮ್ಮ ತತ್ತ್ವಶಾಸ್ತ್ರ-ಸಾಹಿತ್ಯದಲ್ಲಿ ಎಂದೂ ಉಳಿಸುವ ಬರಹಗಳು ಅವರು ಉದ್ಯೋಗದಿಂದ ನಿವೃತ್ತರಾದಮೇಲೇ ಹೊರಬಂದುವು.

ಅವರು ತಮ್ಮ ವಿಶ್ರಾಂತಿಯ ದಿನಗಳನ್ನು ಪೋಲು ಮಾಡದೆ, ಪುಸ್ತಕಗಳನ್ನು ಓದುವುದು, ಓದಿದ್ದನ್ನು ಕುರಿತು ಆಲೋಚನೆ ಮಾಡುವುದು, ಆಲೋಚನೆ ಮಾಡಿದ್ದನ್ನು ಆಚರಣೆಗೆ ತರುವ ಪ್ರಯತ್ನ ಮಾಡುವುದು, ತಾವು ಖಚಿತ ವಾಗಿ ಮನವರಿಕೆ ಮಾಡಿಕೊಂಡದ್ದನ್ನು ಬರಹದಲ್ಲಿ ಮೂಡಿಸುವುದು ಈ ಹವ್ಯಾಸದಲ್ಲಿ ಕಳೆದರು. ತಮ್ಮ ಮನ ಸ್ಸಿಗೆ ಹಿತವೆನಿಸುವ ಕೆಲಸವನ್ನು ಯಾವ ಅಡ್ಡಿ-ಆತಂಕವೂ ಇಲ್ಲದೆ, ಯಾರ ನಿರ್ಬಂಧವೂ ಇಲ್ಲದೆ, ತಮಗೆ ಬೇಕಾದಂತೆ ಮಾಡುವುದು ವಿಶ್ರಾಂತಿಯಲ್ಲಿ ಸಾಧ್ಯ. ಉದ್ಯೋಗದಲ್ಲಿ ದ್ದಾಗ ಏನೇನೋ ಎಡರು-ತೊಡರುಗಳಿರುತ್ತವೆ, ದಾಕ್ಷಿಣ್ಯ ಗಳಿರುತ್ತವೆ, ಬಲವಂತಗಳಿರುತ್ತವೆ. ಇಷ್ಟವಿಲ್ಲದಿದ್ದರೂ ಕಷ್ಟವಾದರೂ ಮಾಡಬೇಕಾದ ಕೆಲಸಗಳಿರುತ್ತವೆ. ಉದ್ಯೋಗದಿಂದ ನಿವೃತ್ತರಾದಮೇಲೆ ಹೀಗಿಲ್ಲವಷ್ಟೆ. ಹಿರಿ ಯಣ್ಣನವರು ಒಂದೇ ಮನಸ್ಸಿನಿಂದ, ಯಾವ ಅಡ್ಡಿಯೂ

ಇಲ್ಲದೆ ತಮ್ಮ ಕೆಲಸವನ್ನು ಮಾಡಲು ತೊಡಗಿದುದು ನಿವೃತ್ತರಾದ ಮೇಲೇ.

ಇಂಥ ಪ್ರಸಿದ್ಧ ವಿದ್ವಾಂಸರನ್ನು ತಿಳಿದ ಜನ ಸುಮ್ಮನೆ ಇರಗೊಡುವುದಿಲ್ಲ. ಇವರು ಮೈಸೂರು ವಿಶ್ವವಿದ್ಯಾನಿಲಯ ದಿಂದ ನಿವೃತ್ತರಾದರೆಂದು ತಿಳಿದೊಡನೆ ದೇಶದ ಹಲವಾರು ವಿಶ್ವವಿದ್ಯಾನಿಲಯಗಳು ಇವರ ಸೇವೆಯನ್ನು ಬಯಸಿದುವು; ಹಲವಾರು ಸಂಸ್ಥೆಗಳು ಇವರನ್ನು ಕರೆದುವು. ವಿದೇಶದಿಂದ ಕೂಡ ಇವರಿಗೆ ಆಹ್ವಾನ ಬಂದಿತು. ಆದರೆ ಇವರು ಇದೊಂದಕ್ಕೂ ಮನಸ್ಸು ಕೊಡಲಿಲ್ಲ; ಮೈಸೂರು ಬಿಟ್ಟು ಕದಲಲಿಲ್ಲ. ಯಾವ ಉದ್ಯೋಗವನ್ನೂ ವಹಿಸಿಕೊಳ್ಳಲು ಒಪ್ಪಲಿಲ್ಲ. ತಮ್ಮ ಪಾಡಿಗೆ ತಾವು ಇರುವುದೆಂದು ನಿಶ್ಚಯಿಸಿದರು.

ಮೈಸೂರಿನ ಲಕ್ಷ್ಮೀಪುರಂ ಬಡಾವಣೆಯಲ್ಲಿ ಮನೆ ಕಟ್ಟಿಸಿಕೊಂಡು ಅಲ್ಲಿಯೇ ಇರತೊಡಗಿದರು. ಚಿಕ್ಕವಯಸ್ಸಿನಲ್ಲಿಯೇ ಮದುವೆಯಾಗಿದ್ದು, ನಡುಪ್ರಾಯದಲ್ಲಿ ಹೆಂಡತಿ ತೀರಿಕೊಂಡಿದ್ದರು. ಇದರಿಂದ ಅವರಿಗೆ ತುಂಬ ದುಃಖವಾಗಿದ್ದರೂ, ಯಾರ ಮುಂದೆಯೂ ಯಾವ ಸಂದರ್ಭದಲ್ಲಿಯೂ ತೋರ್ಪಡಿಸುತ್ತಿರಲಿಲ್ಲ. ಅವರಿಗಿದ್ದುದು ಒಬ್ಬಳೇ ಮಗಳು; ಅವರಿಗೆ ಮದುವೆಯಾಗಿದ್ದು ಗಂಡ ಮೈಸೂರಿನಲ್ಲಿಯೇ ರೈಲ್ವೆ ಕಚೇರಿಯಲ್ಲಿ ಕೆಲಸಮಾಡುತ್ತಿದ್ದರು. ತಂದೆ, ಮಗಳು, ಅಳಿಯ, ಮೊಮ್ಮಕ್ಕಳು ಒಟ್ಟಿಗೆ ಇದ್ದು ನೆಮ್ಮದಿಯ ಸಂಸಾರವನ್ನು ನಡೆಸುತ್ತಿದ್ದರು. ತುಂಬ ಬುದ್ಧಿಶಾಲಿಯಾಗಿದ್ದ, ವಯಸ್ಸಿಗೆ ಬಂದಿದ್ದ ಮೊಮ್ಮಗನೊಬ್ಬ ಇದ್ದಕ್ಕಿದ್ದಂತೆ ತೀರಿಕೊಂಡುದು ಅವರಿಗೆ ಹಿಡಿಸಲಾರದಷ್ಟು ಶೋಕಕ್ಕೆ ಕಾರಣವಾಯಿತು. ಉಳಿ

ದಂತೆ ಅವರ ವಿಶ್ರಾಂತ ಜೀವನ ಶಾಂತವಾಗಿ, ಸುಖವಾಗಿಯೇ ಇದ್ದಿತು.

೧೯೩೫ರಲ್ಲಿ ಅಖಿಲಭಾರತ ಪ್ರಾಚ್ಯ-ಸಮ್ಮೇಳನ (ಓರಿಯಂಟಲ್ ಕಾನ್ಫರೆನ್ಸ್) ಮೈಸೂರಿನಲ್ಲಿ ನಡೆಯಿತು. ಅದರ ಭಾರತೀಯ ತತ್ತ್ವಶಾಸ್ತ್ರ ವಿಭಾಗಕ್ಕೆ ಹಿರಿಯಣ್ಣನವರೇ ಅಧ್ಯಕ್ಷರಾಗಿರಬೇಕೆಂದು ವ್ಯವಸ್ಥಾಪಕರು ಬೇಡಿಕೊಂಡಿದ್ದರು. ಹಿರಿಯಣ್ಣನವರು ಅವರ ಬಲವಂತಕ್ಕೆ ಮಣಿದು ಆ ವರ್ಷ ಆ ವಿಭಾಗದ ಅಧ್ಯಕ್ಷರಾಗಿ ಕೆಲಸವನ್ನು ನಡೆಸಿಕೊಟ್ಟರು. ನಮ್ಮ ದೇಶದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಂದ, ಸಂಸ್ಥೆಗಳಿಂದ ಪ್ರತಿನಿಧಿಗಳೂ ಪಂಡಿತರೂ ನೂರಾರು ಮಂದಿ ಈ ಸಮ್ಮೇಳನದಲ್ಲಿ ನೆರೆದಿದ್ದರು. ಹಿರಿಯಣ್ಣನವರು ಅಧ್ಯಕ್ಷರಾಗಿ ಮಾಡಿದ ಉಪನ್ಯಾಸವನ್ನು ಕೇಳಿ ಅವರೆಲ್ಲರೂ ಸಂತೋಷಪಟ್ಟರು; ತಾವು ಮೈಸೂರಿಗೆ ಬಂದುದು ಸಾರ್ಥಕವಾಯಿತೆಂದುಕೊಂಡರು.

ಇದಾದ ನಾಲ್ಕು ವರ್ಷಗಳ ತರುವಾಯ ಅಖಿಲಭಾರತದ ತತ್ತ್ವಶಾಸ್ತ್ರ ಸಮ್ಮೇಳನದ ವಾರ್ಷಿಕಾಧಿವೇಶನವು ಹೈದರಾಬಾದಿನಲ್ಲಿ ನೆರೆದಾಗ ಹಿರಿಯಣ್ಣನವರನ್ನು ಸಮ್ಮೇಳನಾಧ್ಯಕ್ಷರೆಂದು ಚುನಾಯಿಸಿದ್ದರು. ಸಮ್ಮೇಳನದ ಕಾರ್ಯಕಾರಿ ಸಮಿತಿಯು ಒಮ್ಮತದಿಂದ ಅವರ ಹೆಸರನ್ನು ಒಪ್ಪಿಕೊಂಡಿದ್ದಿತು. ನಮ್ಮ ದೇಶದ ಎಲ್ಲ ತತ್ತ್ವಶಾಸ್ತ್ರಪ್ರಾಧ್ಯಾಪಕರೂ ಪಂಡಿತರೂ ಹಿರಿಯಣ್ಣನವರನ್ನು ಗೌರವಿಸಬೇಕೆಂದಿದ್ದರು. ಆದರೆ ಹಿರಿಯಣ್ಣನವರು ಅಧ್ಯಕ್ಷರಾಗಿರಲು ಒಪ್ಪಲಿಲ್ಲ; ಹೈದರಾಬಾದಿಗೆ ಹೋಗಲೂ ಇಲ್ಲ. ಪದವಿಗಳು, ಪ್ರಶಸ್ತಿಗಳು, ಸನ್ಮಾನಗಳೆಂದರೆ ಅವರು ದೂರ ಇರುತ್ತಿದ್ದರು.

ಮರುವರ್ಷ, ಎಂದರೆ ೧೯೪೦ ರಲ್ಲಿ, ಮದ್ರಾಸು ವಿಶ್ವ ವಿದ್ಯಾನಿಲಯವು ಅವರನ್ನು ಕರೆಯಿಸಿಕೊಂಡಿತು. ಅಲ್ಲಿ ವರ್ಷವರ್ಷವೂ ಮಿಲ್ಲರ್ ಎಂಬಾತನ ಸ್ಮಾರಕವಾಗಿ ದೊಡ್ಡ ದೊಡ್ಡ ವಿದ್ವಾಂಸರನ್ನು ಕರೆಯಿಸಿಕೊಂಡು ಅವರಿಂದ ತತ್ತ್ವಶಾಸ್ತ್ರದ ವಿಚಾರವಾಗಿ ಮೂರು ನಾಲ್ಕು ಉಪನ್ಯಾಸ ಗಳನ್ನು ಏರ್ಪಡಿಸುತ್ತಾರೆ. ಆ ವರ್ಷ ಹಿರಿಯಣ್ಣನವರು ಈ ಉಪನ್ಯಾಸಗಳನ್ನು ಕೊಟ್ಟರು. ಇದೊಂದೇ ಸಂದರ್ಭ ದಲ್ಲಿ ಅವರು ಮೈಸೂರು ಬಿಟ್ಟು ಬೇರೆ ಕಡೆ ಹೋಗಿ ಭಾಷಣ ಮಾಡಿ ಬಂದುದು.

೧೯೫೦ರ ಸೆಪ್ಟಂಬರ್ ಹತ್ತೊಂಬತ್ತರಂದು ಮೈಸೂರಿ ನಲ್ಲಿ ಅವರು ಕಾಲವಾದರು. ಕೊಂಚ ಕಾಲ ಅನಾರೋಗ್ಯ ವಿದ್ದಿತಾದರೂ ಶಾಂತಚಿತ್ತರಾಗಿ, ನೆಮ್ಮದಿಯಿಂದ ಪ್ರಾಣ ಬಿಟ್ಟರು. ಆಗ ಅವರಿಗೆ ಎಪ್ಪತ್ತೊಂಬತ್ತು ವರ್ಷಗಳು.

ವಿದ್ಯಾ–ವಿನಯ ಸಂಪನ್ನ

ಹಿರಿಯಣ್ಣನವರಿಗೆ ಎಷ್ಟು ವಿದ್ಯೆಯಿದ್ದಿತೋ ಅಷ್ಟೂ ವಿನಯವಿದ್ದಿತು. ತಾನು ಬಹಳ ತಿಳಿದಿದ್ದೇನೆನ್ನುವ ಗರ್ವ ಅವರಿಗೆ ಸ್ವಲ್ಪವೂ ಇರಲಿಲ್ಲ; ಪ್ರಪಂಚದ ವಿದ್ವಾಂಸರೆಲ್ಲ ತಮ್ಮ ವಿಚಾರವಾಗಿ ಗೌರವ ಇಟ್ಟುಕೊಂಡಿದ್ದಾರೆನ್ನು ವುದು ತಿಳಿದಿದ್ದರೂ ಹೆಮ್ಮೆ ಪಡುತ್ತಿರಲಿಲ್ಲ. ವಿಶ್ವವಿಖ್ಯಾತ ರಾದ ಡಾ. ಎಸ್. ರಾಧಾಕೃಷ್ಣನ್ ಅಂಥವರೇ ತಮ್ಮ ಬಳಿಗೆ ಬಂದು ತಮ್ಮ ಸಲಹೆ ಕೇಳುತ್ತಿದ್ದಾಗಲೂ ಅವರ ನಡ ವಳಿಕೆ ಬದಲಾಗಲಿಲ್ಲ. ಯಾರು ತಮ್ಮಲ್ಲಿಗೆ ಬಂದರೂ ವಿನಯದಿಂದ, ನಮ್ರತೆಯಿಂದ ನಡೆದುಕೊಳ್ಳುತ್ತಿದ್ದರು. ಸಣ್ಣವರಾಗಲಿ, ದೊಡ್ಡವರಾಗಲಿ ಯಾರ ವಿಚಾರವಾಗಿಯೂ

ಅವರಿಗೆ ತಾತ್ಸಾರಭಾವನೆ ಇರುತ್ತಿರಲಿಲ್ಲ. ಯಾರು ಏನು ಕೇಳಿದರೂ ಆದರದಿಂದ, ಪ್ರಾಮಾಣಿಕವಾಗಿ ಉತ್ತರ ಹೇಳುವರು. ಯಾವ ಸಂದರ್ಭದಲ್ಲಿಯೂ ದನಿಯೇರಿಸುತ್ತಿರಲಿಲ್ಲ, ಗಟ್ಟಿಯಾಗಿ ಮಾತನಾಡುತ್ತಿರಲಿಲ್ಲ. ಎದುರಿಗಿದ್ದವರಿಗೆ ಮಾತ್ರ ಕೇಳುವಂತೆ ನಯವಾಗಿ, ಸ್ಫುಟವಾಗಿ ಮಾತನಾಡುವುದು ಅವರ ಸ್ವಭಾವ. ಮಾತೂ ಅಷ್ಟೆ, ಎಷ್ಟು ಬೇಕೋ ಅಷ್ಟೆ; ಒಂದು ಮಾತೂ ಹೆಚ್ಚಿಲ್ಲ. ಮಾತಿನಲ್ಲಿ ಕೊಂಕು, ಬಿರುಸು, ಪರಿಹಾಸ, ಜೋರು ಇವು ಎಳ್ಳಷ್ಟೂ ಇಲ್ಲ. ಬೇರೆಯವರ ಮನಸ್ಸಿಗೆ ತಮ್ಮ ನಡವಳಿಕೆಯಿಂದಾಗಲೀ ಮಾತಿನಿಂದಾಗಲೀ ಸ್ವಲ್ಪವೂ ಬೇಸರವಾಗದ ಹಾಗೆ, ನೋವಾಗದ ಹಾಗೆ ಎಚ್ಚರವಾಗಿರುತ್ತಿದ್ದರು.

ಅವರು ಚಿಕ್ಕಂದಿನಿಂದ ಕಲಿತದ್ದು ಸಂಸ್ಕೃತ; ಅದರಲ್ಲಿ ಆಳವಾದ ತಿಳುವಳಿಕೆ ಅವರದ್ದು. ತಾವಾಗಿ ಇಷ್ಟಪಟ್ಟು ಕಲಿತದ್ದು ತತ್ತ್ವಶಾಸ್ತ್ರ, ಅದರಲ್ಲಿಯೂ ಭಾರತೀಯ ತತ್ತ್ವಶಾಸ್ತ್ರ; ಇದರಲ್ಲಂತೂ ಅವರಿಗೆ ಸರಿಸಮಾನರಾದವರು ನಮ್ಮ ದೇಶದಲ್ಲಾಗಲೀ ಹೊರದೇಶಗಳಲ್ಲಾಗಲೀ ಯಾರೂ ಇರಲಿಲ್ಲ. ಇಂಗ್ಲೀಷ್ ಸಾಹಿತ್ಯದಲ್ಲಿ ಅವರಿಗೆ ಪ್ರೀತಿ ಮಾತ್ರವಲ್ಲ, ಅದರ ಪರಿಚಯ ಚೆನ್ನಾಗಿದ್ದಿತು. ಲಂಡನ್ನಿನ 'ಟೈಂಸ್ ಲಿಟರರಿ ಸಪ್ಲಿಮೆಂಟ್' ಮೊದಲಾದ ಇಂಗ್ಲೀಷ್ ಸಾಹಿತ್ಯ ಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದರು. ಅವರ ಇಂಗ್ಲೀಷ್ ಬರಹಗಳಲ್ಲಿ ಕಾಣಬರುವ ಶೈಲಿ ಎಷ್ಟು ಸರಳಸುಂದರವಾಗಿದೆ ಬಲ್ಲಿರಾ? ಇಂಗ್ಲೀಷ್ ಮಾತೃಭಾಷೆಯಾಗಿದ್ದವರು ಕೂಡ ಹಾಗೆ ಬರೆಯಲಾರರು. ಅವರ ಬರಹ ಖಚಿತ, ಸಹಜ, ಸರಳ.

ಇಷ್ಟೆಲ್ಲ ಪಾಂಡಿತ್ಯವಿದ್ದರೂ ಅದನ್ನು ತೋರಿಸಿಕೊಳ್ಳ

ಬೇಕೆಂಬ ಚಪಲ ಅವರಿಗಿರಲಿಲ್ಲ. ತಾವು ತಿಳಿದುಕೊಳ್ಳಬೇಕಾದುದು ಎಷ್ಟೋ ಇದೆ, ತಮಗಿಂತ ಹೆಚ್ಚು ತಿಳಿದವರಿದ್ದಾರೆ ಎಂದು ನಿಜವಾಗಿ ಅವರು ನಂಬಿದ್ದರು. ಒಂದು ಉದಾಹರಣೆ. ಅವರು ಉದ್ಯೋಗದಿಂದ ನಿವೃತ್ತರಾಗುವ ವೇಳೆಗೆ ಅವರು ದೇಶದಲ್ಲೆಲ್ಲ ಪ್ರಸಿದ್ಧ ಪಂಡಿತರಾಗಿದ್ದರು; ಅವರಿಂದ ಕಲಿಯಲು, ತಿಳಿಯಲು ಈ ದೇಶದಿಂದಲೂ ಬೇರೆ ದೇಶಗಳಿಂದಲೂ ವಿದ್ವಾಂಸರು ಬರುತ್ತಿದ್ದರು. ಅವರ ಅಭಿಪ್ರಾಯವೆಂದರೆ ಎಲ್ಲರಿಗೂ ಮಾನ್ಯವೇ. ಹೀಗಿದ್ದರೂ ನಿವೃತ್ತರಾದ ಮೇಲೆ ಅವರೇನು ಮಾಡುತ್ತಿದ್ದರು ಗೊತ್ತೆ? ವಿದ್ಯಾರ್ಥಿಯಂತೆ ಕೈಯಲ್ಲಿ ಪುಸ್ತಕ ಹಿಡಿದು ಪಾಠ ಕಲಿಯಲು ಗುರುಗಳೊಬ್ಬರ ಮನೆಗೆ ಹೋಗಿ ಬರುತ್ತಿದ್ದರು. ಆ ಗುರುಗಳೋ ಬಡವರು, ಸಣ್ಣ ಮನೆಯಲ್ಲಿದ್ದವರು. ಇಷ್ಟು ದೊಡ್ಡ ಪ್ರೊಫೆಸರ್ ಈ ಗುರುಗಳನ್ನೇ ಮನೆಗೆ ಕರೆಯಿಸಿಕೊಳ್ಳಬಹುದಾಗಿತ್ತಲ್ಲ? ಹಿರಿಯಣ್ಣನವರು ಹಾಗೆ ಮಾಡದೆ ತಾವೇ ಗುರುಗಳ ಮನೆಗೆ ನಡೆದು ಹೋಗುತ್ತಿದ್ದರು. ಏಕೆಂದರೆ, ಕಲಿಯುವವರು ಕಲಿಸುವವರ ಬಳಿಗೆ ಹೋಗುವುದು ಸಂಪ್ರದಾಯ. ಹಿರಿಯಣ್ಣನವರಿಗೆ ಈ ಸಂಪ್ರದಾಯದಲ್ಲಿ ಶ್ರದ್ಧೆ, ತನಗಿಂತ ಹೆಚ್ಚು ತಿಳಿದವರ ಬಗ್ಗೆ ಅಷ್ಟು ಗೌರವ.

ಹಿರಿಯಣ್ಣನವರ ಈ ಗುರುಗಳು ಯಾರು? ಮಹಾವಿದ್ವಾನ್ ಪಾಲಘಾಟ್ ನಾರಾಯಣಶಾಸ್ತ್ರಿಗಳು. ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಅದ್ವೈತದ ಪ್ರಾಧ್ಯಾಪಕರಾಗಿದ್ದವರು; ತುಂಬ ತಿಳುವಳಿಕೆ ಉಳ್ಳವರು. ಕಡೆಗಾಲದಲ್ಲಿ ಸಂನ್ಯಾಸಿಗಳಾಗಿ ಪ್ರಾಣಬಿಟ್ಟ ಮಹನೀಯರು. ದಿಟವಾಗಿ ಹಿರಿಯಣ್ಣನವರು ಇವರ ಶಿಷ್ಯರೇನಲ್ಲ. ಅವರ ಮನೆಗೆ

ಇವರು ಹೋಗಿ ಬರುತ್ತಿದ್ದುದು ವೇದಾಂತ ತೊಡಕಾದ ಪ್ರಶ್ನೆಗಳ ವಿಚಾರವಾಗಿ ಚರ್ಚೆ ಮಾಡಲು, ಸಮಾಧಾನ ಪಡೆದುಕೊಳ್ಳಲು. ಬಹುಶಃ ಇಬ್ಬರಿಗೂ ಸಮನಾದ ಪಾಂಡಿತ್ಯವೇ. ಆದರೂ ಹಿರಿಯಣ್ಣನವರು ಶಾಸ್ತ್ರಿಗಳನ್ನು ಗುರುಗಳಂತೆ ಕಾಣುತ್ತಿದ್ದರು. ಅವರ ವಿನಯ ಎಷ್ಟಿದ್ದಿತು, ನೋಡಿ.

ಹಿರಿಯಣ್ಣನವರ ಸ್ನೇಹಿತರಲ್ಲಿ ಮದ್ರಾಸಿನ ಮಹಾ ಮಹೋಪಾಧ್ಯಾಯ ಕುಪ್ಪುಸ್ವಾಮಿಶಾಸ್ತ್ರಿಗಳು ಮುಖ್ಯ ರಾದವರು, ಆಪ್ತರಾದವರು. ಅವರು ಮದ್ರಾಸು ವಿಶ್ವ ವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದವರು– ಹಿರಿಯಣ್ಣನವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದ್ದಂತೆ. ಅವರನ್ನು ಅಲ್ಲಿನವರು 'ಕುಲಪತಿ'ಗಳೆಂದು ಕರೆ ಯುತ್ತಿದ್ದರು. ಹಿಂದಿನ ಕಾಲದಲ್ಲಿ ಹತ್ತು ಸಾವಿರ ವಿದ್ಯಾ ರ್ಥಿಗಳಿಗೆ ಪಾಠ ಹೇಳಿಕೊಟ್ಟು, ಅವರ ಊಟ-ಉಡುಗೆ ಗಳನ್ನೂ ನೋಡಿಕೊಳ್ಳುತ್ತಿದ್ದ ಗುರುವಿಗೆ ಈ ಹೆಸರಿದ್ದಿತು. ಕುಪ್ಪುಸ್ವಾಮಿಶಾಸ್ತ್ರಿಗಳು ಕಾಲೇಜಿನಲ್ಲಿಯೂ ಮನೆಯ ಲ್ಲಿಯೂ ಸಾವಿರಾರು ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಟ್ಟ ವರೇ; ಕೆಲವರಿಗೆ ಊಟವನ್ನೂ ಹಾಕಿಸುತ್ತಿದ್ದರು. ಹೀಗೆ ಹಳೆಯ ಸಂಪ್ರದಾಯವೊಂದನ್ನು ಅವರು ಉಳಿಸಿಕೊಂಡು ಬಂದಿದ್ದರು. ದೊಡ್ಡ ಪಂಡಿತರು, ಹಲವಾರು ಅಪುರೂಪದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರಿಗೂ ಹಿರಿಯಣ್ಣ ನವರಿಗೂ ತುಂಬ ಸ್ನೇಹ. ಹಿರಿಯಣ್ಣನವರಿಗೆ ಮೊದಲೇ ಇವರು ತೀರಿಕೊಂಡರು.

ಮದ್ರಾಸಿನಲ್ಲಿ ಶಾಸ್ತ್ರಿಗಳ ಶಿಷ್ಯರಾದ ಡಾ. ವಿ. ರಾಘ ವನ್ ಮೊದಲಾದವರು ಶಾಸ್ತ್ರಿಗಳ ನೆನಪಿಗೆಂದು 'ಕುಪ್ಪು

ಸ್ವಾಮಿಶಾಸ್ತ್ರಿ ರಿಸರ್ಚ್ ಇನ್‌ಸ್ಟಿಟ್ಯೂಟ್' ಎಂಬ ಸಂಸ್ಥೆಯನ್ನು ೧೯೪೪ರಲ್ಲಿ ಏರ್ಪಡಿಸಿದರು; ಇದು ಮೈಲಾಪುರದ ಸಂಸ್ಕೃತ ಕಾಲೇಜಿನಲ್ಲಿಯೇ ವ್ಯವಸ್ಥೆಗೊಂಡಿದೆ. ಇದರ ಸ್ಥಾಪನೆಗೂ ನಿರ್ವಹಣೆಗೂ ಹಿರಿಯಣ್ಣನವರು ಬೆಂಬಲವಾಗಿ ನಿಂತರು. ಅದರ ಸಂಶೋಧನ ಸಮಿತಿಗೆ ಅಧ್ಯಕ್ಷರಾಗಿಯೂ ಇದ್ದರು. ತಮ್ಮ ಮರಣಾನಂತರ ತಮ್ಮ ಬಳಿಯಿರುವ ಪುಸ್ತಕಗಳನ್ನೆಲ್ಲ ಕುಪ್ಪುಸ್ವಾಮಿಶಾಸ್ತ್ರಿ ರಿಸರ್ಚ್ ಇನ್‌ಸ್ಟಿಟ್ಯೂಟಿಗೇ ಕೊಡಬೇಕೆಂದು ಇಷ್ಟಪಟ್ಟಿದ್ದರು. ಅದರಂತೆಯೇ ಅವರ ಮೊಮ್ಮಕ್ಕಳು ಸೊಗಸಾದ ಅವರ ಪುಸ್ತಕ ಸಂಗ್ರಹವನ್ನು ಈ ಸಂಸ್ಥೆಗೇ ಕೊಟ್ಟರು; ಈಗಲೂ ಅದು ಅಲ್ಲಿಯೇ ಇದೆ.

ಆಡಂಬರವಿಲ್ಲದ ಬದುಕು

ವಿದ್ಯೆಯಲ್ಲಿ, ಜ್ಞಾನದಲ್ಲಿ ಹಿರಿಯಣ್ಣನವರಿಗೆ ಸರಿಸಮರಾದವರು ಬಹುಮಂದಿ ಇರಲಿಲ್ಲ; ಅವರನ್ನು ಮೀರಿಸಿದವರಂತೂ ಇರಲೇ ಇಲ್ಲ. ವಿದ್ವಾಂಸರ ಪ್ರಪಂಚದಲ್ಲಿ ಅವರಿಗೆ ದೊರಕಿದ ಮನ್ನಣೆಯೂ ಸಣ್ಣದೇನಲ್ಲ. ಇಷ್ಟಿದ್ದರೂ ಅವರ ಮನಸ್ಸು ಹಸುಗೂಸಿನಂಥದು. ಯಾವ ಬಗೆಯಾದ ಠೀವಿಯಾಗಲಿ, ಠೇಂಕಾರವಾಗಲೀ ಅವರ ಬಳಿ ಸುಳಿಯಲಿಲ್ಲ. ಅವರು ಮಾತನಾಡಲಿ, ಬರೆಯಲಿ, ಕೆಲಸಮಾಡಲಿ ಸಹಜವಾಗಿಯೇ, ಚೆನ್ನಾಗಿಯೇ, ಒಪ್ಪವಾಗಿಯೇ ಇರುವುದು; ಅದರಲ್ಲಿ ಕೃತ್ರಿಮತೆ ಎನ್ನುವುದು ಎಳ್ಳಷ್ಟೂ ಇರದು. ತಿಳಿದಿಲ್ಲದುದನ್ನು 'ತಿಳಿದಿಲ್ಲ' ಎಂದು ಹೇಳಲು ಅವರಿಗೆ ಯಾವ ಸಂಕೋಚವೂ ಇರದು. ತಿಳಿದುದನ್ನು ಖಂಡಿತ ಮಾಡಿ, ಬೇರೆಯವರ ಬಾಯಿ ಕಟ್ಟುವಂತೆ ಹೇಳಲಾರರು.

'ಇದ್ದೀತು ; ಇರುವುದು ಸಾಧ್ಯ ; ಹೀಗೆಂದು ಒಪ್ಪಿಕೊಳ್ಳಲು ಅಡ್ಡಿಯಿಲ್ಲ ; ಹೀಗೆಂದು ಹೇಳುವುದು ಕಷ್ಟ ; ನನಗೆ ತಿಳಿದ ಮಟ್ಟಿಗೆ ಇದು ಹೀಗೆ ; ಯೋಚನೆ ಮಾಡಬೇಕು ; ನಿರ್ಣಯ ವಾಗಿ ಹೇಳಲಾರೆ'–ಇದು ಅವರ ಉತ್ತರದ ಧಾಟಿ. ಆದರೆ ಪ್ರಶ್ನೆ ಕೇಳಿದವರಿಗೆ ಉಪಯೋಗವಾಗುವ, ತಮಗೆ ತಿಳಿದ ಎಲ್ಲ ವಿವರಗಳನ್ನು ಒದಗಿಸುವರು! ಅದರಲ್ಲೇನು ಮುಚ್ಚು ಮರೆ ಇಲ್ಲ, ತಡೆಹಿಡಿಯಿಲ್ಲ. ತಮಗೆ ತಿಳಿದುದಕ್ಕಿಂತ ಹೆಚ್ಚು ಹೇಳುವ ಸಾಹಸ ಅವರು ಎಂದೂ ಮಾಡುತ್ತಿರಲಿಲ್ಲ ; ತಾವು ಮೊದಲು ಆಲೋಚನೆ ಮಾಡದೆ ಏನನ್ನೂ ಖಚಿತ ವಾಗಿ ಹೇಳುತ್ತಿರಲಿಲ್ಲ. ಯಾರಾದರೂ ಪ್ರಶ್ನೆ ಕೇಳಿದಾಗ ಉತ್ತರ ತಮಗೆ ಖಚಿತವಾಗಿರದಿದ್ದರೆ "ಯೋಚನೆ ಮಾಡು ತ್ತೇನೆ. ನಾಳೆ ಹೇಳಿದರಾಗದೆ ? " ಎನ್ನುವರು. ಮರುದಿನ ದೊಳಗೆ ಯೋಚನೆ ಮಾಡಿ ಉತ್ತರವನ್ನು ಸಿದ್ಧಮಾಡು ವರು. ಬಾಯಿಗೆ ಬಂದ ಹಾಗೆ ಎಂದೂ ಹೇಳಿದವರಲ್ಲ ಅವರು.

ಎಂದರೆ ಎಷ್ಟು ಸಂಯಮ ಇರಬೇಕು! ತಮ್ಮ ಮನಸ್ಸಿನ ಮೇಲೆ, ತಮ್ಮ ಮಾತಿನ ಮೇಲೆ ಅಷ್ಟು ಹತೋಟಿ ಅವರಿಗೆ. ಮಾತಾಡಿದರೂ ಹಾಗೆಯೇ : ನಯ, ಹಿತ. ಊರವರಿಗೆಲ್ಲ ಉಪದೇಶ ಹೇಳುವ ಮಾತಲ್ಲ ಅದು. ತಮ್ಮ ಮನಸ್ಸಿನಲ್ಲಿ ರುವುದನ್ನು ಎದುರಿಗಿರುವವರಿಗೆ ತಿಳಿಯ ಹೇಳುವುದಷ್ಟೇ ಮಾತಿನ ಉದ್ದೇಶ. ಮಾತಿನ ಮೋಡಿಯಾಗಲೀ, ಮೇಲಾಟ ವಾಗಲೀ, ಚಮತ್ಕಾರವಾಗಲೀ, ಉದ್ವೇಗವಾಗಲೀ ಇರುತ್ತಿರ ಲಿಲ್ಲ. ಮುಖ್ಯವಾಗಿ, ಏನೊಂದೂ ಆಡಂಬರವಿಲ್ಲದ ಮಾತು; ಅಂಥದೇ ಬರಹ.

ಇನ್ನು ಅವರು ಬದುಕಿದ ಬಗೆಯೋ ? ಅಷ್ಟೇ ನಿರಾ

ಡಂಬರವಾದುದು. ಅಷ್ಟು ದೊಡ್ಡ ಪಂಡಿತರು ಹೆಸರಾಂತ ಲೇಖಕರು, ಮನೆಯಲ್ಲಿ ಅವರು ಕೆಲಸ ಮಾಡುವ ಕೋಣೆ ಹೇಗಿದ್ದಿತು, ಗೊತ್ತೆ ? ಮನೆಗೆ ಹೋದಿರೆಂದರೆ ಹೊರ ಕೋಣೆಯೇ ಅವರದ್ದು. ಈ ಕೋಣೆಯನ್ನು ಹೊಕ್ಕಿರೆಂದರೆ ಅಲ್ಲಿ ನೀವು ಕಾಣುವುದೇನು ? ಕುರ್ಚಿ, ಮೇಜು, ಸೋಫ, ರತ್ನಗಂಬಳಿ ಇವ್ಯಾವುದೂ ಅಲ್ಲಿಲ್ಲ. ನೆಲದ ಮೇಲೆ ಹಾಸಿರುವು ದೊಂದು ಸಣ್ಣಕಡ್ಡಿಯ ಚಾಪೆ; ಚಾಪೆಯೇನೋ ಸೊಗ ಸಾದುದೇ ಎನ್ನಿ. ಚಾಪೆಯ ಮೇಲೊಂದು ಸಣ್ಣ ಇಳಿಜಾರು ಮೇಜು ; ಕೆಳಗೇ ಕುಳಿತು ಬರೆಯುವಂಥದು. ಹಿರಿಯಣ್ಣ ನವರು ಚಾಪೆಯ ಮೇಲೇ ಪದ್ಮಾಸನ ಹಾಕಿಕೊಂಡು ಕುಳಿತು ಬರೆಯುವರು. ಕುರ್ಚಿ–ಮೇಜಿನ ಅಗತ್ಯ ಅವರಿ ಗಿಲ್ಲ.

ಇನ್ನು ಅವರನ್ನು ಕಾಣಲು ಬಂದವರು ಕೂಡುವುದೆಲ್ಲಿ? ಚಾಪೆಯ ಮೇಲೆ ಕುಳಿತರಂತೂ ಸರಿಯೇ. ಆದರೆ ಹಾಗೆ ಕೂಡಬೇಕೆಂಬ ನಿರ್ಬಂಧವಿಲ್ಲ. ಬಂದವರು ಕೂಡಲು ಅರ್ಧ ಆರಾಮ ಕುರ್ಚಿಯೊಂದು ಕೋಣೆಯಲ್ಲಿ ಇರುತ್ತಿತ್ತು ಹತ್ತಿರದಲ್ಲಿಯೇ ಒಂದು ಸ್ಟೂಲು, ಅವರೊಂದಿಗೆ ಮಾತ ನಾಡುವಾಗ ಹಿರಿಯಣ್ಣನವರು ಕೂಡಲು ತಮ್ಮನ್ನು ಕಂಡು ತಮ್ಮೊಂದಿಗೆ ಮಾತನಾಡಲು ಬಂದವರು ಯಾರೇ ಆಗಲೀ ಅವರಿಗೆ ಕುರ್ಚಿಯನ್ನು ತೋರಿಸಿ ಅದರಲ್ಲಿ ಕುಳ್ಳಿರಿಸಿ ತಾವು ಸ್ಟೂಲಿನ ಮೇಲೆ ಕುಳಿತು ಮಾತನಾಡಿಸುವರು. ಪಕ್ಕ ದಲ್ಲಿಯೇ ಉದ್ದನೆಯದೊಂದು ಬೆಂಚೂ ಇರುತ್ತಿತ್ತು. ಬಂದ ಮಂದಿ ಹೆಚ್ಚಿನ ಸಂಖ್ಯೆಯಲ್ಲಿದ್ದರೆ ಕೂಡಲು.

ಅದೇ ಅವರು ಓದುವ, ಬರೆಯುವ, ವಿಶ್ರಮಿಸಿಕೊ ಳ್ಳುವ ಕೊಠಡಿ. ಬರೆಯುವ ಸಾಮಗ್ರಿಗಳನ್ನೂ ಓದುವ

ಪುಸ್ತಕಗಳನ್ನೂ ಅಲ್ಲಿಯೇ ಒಂದು ಅಲಮಾರದಲ್ಲಿ ನಾಜೂಕಾಗಿ, ಅಚ್ಚುಕಟ್ಟಾಗಿ ಇಟ್ಟಿರುತ್ತಿದ್ದರು. ಇಷ್ಟು ಸರಳವಾದ, ನಿರಾಡಂಬರದ ವಾತಾವರಣದಲ್ಲಿ ಮೂಡಿಬಂದ ಬರಹಗಳು ಪ್ರಪಂಚದಲ್ಲೆಲ್ಲ ಪ್ರಸಿದ್ಧವಾದುವು. ಅವರು ತೊಡುತ್ತಿದ್ದ ಉಡುಪು ಆಡಂಬರವಿಲ್ಲದ್ದು. ಬಿಳಿಬಣ್ಣದ ನಿಲುವಂಗಿ, ಸಾಮಾನ್ಯವಾದುದೇ; ಆದರೆ ಶುಭ್ರವಾದುದು. ಪಂಚೆಗಾಗಲಿ ಪೇಟಕ್ಕಾಗಲೀ ಉತ್ತರೀಯಕ್ಕಾಗಲೀ ಜರತಾರಿಯಿಲ್ಲ; ಬಿಳಿ, ತೆಳುವು. ಬಟ್ಟೆಯ ಮೇಲೆ ಎಲ್ಲೂ ಒಂದು ಕಣವಾಗಲೀ ಕೊಳೆ ಕಾಣಿಸುತ್ತಿರಲಿಲ್ಲ. ಎಲ್ಲದರಲ್ಲಿಯೂ ಅಚ್ಚು ಕಟ್ಟು, ಶುಚಿ; ರುಚಿ, ಹಿತ, ಮಿತ.

ಅವರು ಪುಸ್ತಕಗಳನ್ನು ಇರಿಸಿಕೊಳ್ಳುತ್ತಿದ್ದುದೂ

ಹೀಗೆಯೇ. ಜನರನ್ನು ಅವರು ವಿನಯದಿಂದ, ಮರ್ಯಾದೆಯಿಂದ ಕಾಣುತ್ತಿದ್ದಂತೆಯೇ ಪುಸ್ತಕಗಳನ್ನೂ ನಯವಾಗಿ, ಮರ್ಯಾದೆಯಿಂದ ನೋಡಿಕೊಳ್ಳುತ್ತಿದ್ದರು. ಪುಸ್ತಕಗಳನ್ನು ಓದಿದ ಮೇಲೆ ತಮಗೆ ಮುಖ್ಯವೆಂದು ಕಂಡು ಬಂದ ಸಂಗತಿಗಳನ್ನು ಅಥವಾ ತಮ್ಮ ಟೀಕೆ-ಟಿಪ್ಪಣಿಗಳನ್ನು ಬೇರೆ ಬೇರೆ ಚೀಟಿಗಳಲ್ಲಿ ಬರೆದಿಟ್ಟುಕೊಳ್ಳುತ್ತಿದ್ದರು ; ಪುಸ್ತಕದಲ್ಲಿಯೇ ಆಗಾಗ ಪೆನ್ಸಿಲ್‌ನಿಂದ ಹಗುರಾಗಿ ಗುರುತು ಮಾಡುತ್ತಿದ್ದುದೂ ಉಂಟು. ಅವರ ಬಳಿ ಪುಸ್ತಕಗಳು ಬೆಳೆಯುತ್ತಿದ್ದುವು. ದೇಶವಿದೇಶಗಳ ಲೇಖಕರು ಇವರಿಗೆ ಮರ್ಯಾದೆಯಿಂದ ಕಳುಹಿಸುತ್ತಿದ್ದ ಪ್ರತಿಗಳು ವಿಮರ್ಶೆಗೆಂದು ಬರುತ್ತಿದ್ದ ಪುಸ್ತಕಗಳು, ತಾವೇ ಕೊಳ್ಳುತ್ತಿದ್ದ ಪುಸ್ತಕಗಳು-ಹೀಗೆ ಪುಸ್ತಕಗಳ ಸಂಖ್ಯೆ ಹೆಚ್ಚುತ್ತಲೇ ಇದ್ದಿತು.

ಇಷ್ಟನ್ನೂ ತಮ್ಮ ಬಳಿಯೇ ಇರಿಸಿಕೊಳ್ಳಬೇಕೆಂಬ ಆಸೆಯೇನು ಹಟವೇನು ಇವರಿಗಿರಲಿಲ್ಲ. ಆಗಾಗ ತಮ್ಮ ಬಳಿ ಇದ್ದ ಪುಸ್ತಕಗಳನ್ನೆಲ್ಲ ನೋಡಿ, ಅವುಗಳಲ್ಲಿ ಕೆಲವನ್ನು ಇತರರಿಗೆ ಕೊಟ್ಟು ಬಿಡುತ್ತಿದ್ದರು. ತಮ್ಮ ಅಧ್ಯಯನಕ್ಕೆ ಅಗತ್ಯವೆಂದು ತೋರಿದುವನ್ನು ಮಟ್ಟಿಗೆ ಉಳಿಸಿಕೊಳ್ಳುತ್ತಿದ್ದರು. ಈ ಪುಸ್ತಕಗಳನ್ನು ಆರಿಸಿಕೊಳ್ಳುವುದರಲ್ಲಿ ಅವರಿಗಿದ್ದ ವಿವೇಕವನ್ನು ನೀವು ಕಾಣಬೇಕಾದರೆ ಮದ್ರಾಸಿನ ಕುಪ್ಪುಸ್ವಾಮಿಶಾಸ್ತ್ರಿ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿಟ್ಟಿರುವ ಅವರ ಪುಸ್ತಕ ಸಂಗ್ರಹವನ್ನು ನೋಡಬೇಕು. ಎಂಥ ಅಮೂಲ್ಯವಾದ, ಸೊಗಸಾದ ಪುಸ್ತಕಗಳು ದಿಟವಾಗಿಯೂ ಆರಿಸಿದ ಅಣಿಮುತ್ತುಗಳು.

ಅವರ ಬರಹದಲ್ಲಿ ಕೂಡ ವಿಶೇಷವಾದ ಗುಣ ಇದ್ದಿತು.

ಇಂಗ್ಲೀಷಾಗಲೀ, ಸಂಸ್ಕೃತವಾಗಲೀ, ಕನ್ನಡವಾಗಲೀ ಅಕ್ಷರಗಳು ಗುಂಡಗೆ, ಸ್ಫುಟವಾಗಿರುತ್ತಿದ್ದುವು; ಸ್ವಲ್ಪವಾದರೂ ಅವಸರವಿಲ್ಲದೆ, ಖಚಿತವಾಗಿ ಕೈಯಾಡಿಸಿದುವು. ಅಕ್ಷರಗಳು ಸಣ್ಣವು; ಆದರೆ ಓದಲು ಏನೇನೂ ತೊಂದರೆಯಿರುತ್ತಿರಲಿಲ್ಲ. ಮಸಿ ಬೀಳುವುದು, ಚಿತ್ತಾಗುವುದು, ತಪ್ಪಾಗುವುದು ಬಿಟ್ಟುಹೋಗುವುದು. ಇವನ್ನು ಅವರ ಬರಹದಲ್ಲಿ ಕಾಣುವುದು ಸಾಧ್ಯವಿಲ್ಲ. ಚೆನ್ನಾಗಿ ಆಲೋಚನೆ ಮಾಡಿದ ಮೇಲೇ ಅವರು ಕಾಗದಕ್ಕೆ ಲೇಖನಿಯನ್ನು ಮುಟ್ಟಿಸುತ್ತಿದ್ದದು. ಮನಸ್ಸಿನಲ್ಲಿ ಸ್ಪಷ್ಟಮಾಡಿಕೊಂಡನಂತರವೇ ಬರಹದಲ್ಲಿ ಮೂಡುವುದು. ಬೇಕುಬೇಕೆಂದು ಅವರು ಏನನ್ನೂ ಬರೆಯುತ್ತಿರಲಿಲ್ಲ; ಆ ಚಟ ಅವರಿಗಿರದು. ಅಗತ್ಯವಿದ್ದರೇ ಮಾತು, ಬರಹ; ಅದೂ ಅಗತ್ಯವಿದ್ದಷ್ಟೇ, ಮನಸ್ಸಿನಲ್ಲಿ ಮೊದಲೇ ನಿಶ್ಚಯ ಮಾಡಿಕೊಂಡ ಮೇಲೆ ಹೀಗಿದ್ದಾಗ. ಮಾತಿನಲ್ಲಾಗಲೀ ಬರಹದಲ್ಲಾಗಲೀ ತಪ್ಪುನೆಪ್ಪಾಗುವುದು ಹೇಗೆ ? ಕಾಲ ಕಳೆಯಲೆಂದು ಕಾಡುಹರಟೆ, ವಿನೋದಕ್ಕೆಂದು ಬರವಣಿಗೆ—ಎರಡೂ ಅವರಿಗೆ ಇಷ್ಟವಿಲ್ಲ.

ವಿವೇಕ–ವಿಚಾರ–ಆಚಾರ

ವಿವೇಕವೆನ್ನುವ ಮಾತನ್ನು ನೀವು ಕೇಳಿದ್ದೀರಲ್ಲವೆ ? ವಿವೇಕವೆಂದರೆ 'ಬೇರೆ ಬೇರೆ ಮಾಡುವುದು' ಎಂದರ್ಥ. ತಪ್ಪನ್ನು ಒಪ್ಪಿನಿಂದ, ನೇರವಾದುದನ್ನು ಓರೆ ಕೋರೆಗಳಿಂದ ಒಳ್ಳೆಯದನ್ನು ಕೆಟ್ಟದ್ದರಿಂದ, ಕಾಳನ್ನು ಜೊಳ್ಳಿನಿಂದ, ಎಂದೂ ಇರುವುದನ್ನು ಈಗಿದ್ದು ಮರುಗಳಿಗೆಯಲ್ಲಿ ಮರೆಯಾಗುವುದರಿಂದ, ಆಳವಾಗಿರುವುದನ್ನು ಮೇಲೆ ಮೇಲಿರುವುದರಿಂದ ಬೇರೆ ಮಾಡುವುದೇ ವಿವೇಕ. ಬೇರೆ ಮಾಡುವು

ದಾಗದೆ ಒಂದನ್ನು ಇನ್ನೊಂದಕ್ಕೆ ಹೊಂದಿಸಿಬಿಟ್ಟರೆ ಅವಿವೇಕವಾಗುತ್ತದೆ. ಸಾಮಾನ್ಯವಾಗಿ ನಾವೆಲ್ಲ ಅವಿವೇಕಿಗಳೇ. ಬದುಕಿನಲ್ಲಿ ಹಣ ಮುಖ್ಯ ಎಂದುಕೊಳ್ಳುತ್ತೇವೆ, ಹೆಸರು ಮುಖ್ಯ ಎಂದುಕೊಳ್ಳುತ್ತೇವೆ, ಆಸ್ತಿ ಇದ್ದರೆ ಆಯಿತು, ಲಾಭ ಬಂದರೆ ಸಾಕು, ಬೇರೆಯವರು ಮೆಚ್ಚಿಕೊಂಡರೆ ಒಳ್ಳೆಯದು ಎಂದೆಲ್ಲ ಅಂದುಕೊಳ್ಳುತ್ತೇವೆ. ಆದರೆ ನಿಜವಾಗಿ ನಮ್ಮ ಸುಖ ಇರುವುದೆಲ್ಲಿ ಎನ್ನುವುದನ್ನು ಅರಿತಿರುವುದಿಲ್ಲ. ಬಯಕೆಗಳನ್ನು ಪೂರೈಸಿಕೊಳ್ಳುವುದಕ್ಕಿಂತ ತೀಟೆಗಳನ್ನು ತೀರಿಸಿಕೊಳ್ಳುವುದಕ್ಕಿಂತ ಹೆಚ್ಚಾಗಿ ಹಣ ಕೂಡಿಡುವುದಕ್ಕಿಂತ ಮನಸ್ಸಿನ ನೆಮ್ಮದಿ ಮುಖ್ಯ. ಇದನ್ನು 'ಶಾಂತಿ' ಎನ್ನುವೆವು. ಇದನ್ನು ಪಡೆಯಬೇಕೆಂದರೆ ಬಯಕೆಗಳನ್ನು ಬಿಗಿ ಹಿಡಿಯಬೇಕು, ಮನಸ್ಸಿನ ಮೇಲೆ ಹಿಡಿತವಿರಬೇಕು, ಯಾವುದು ಉಚಿತ ಯಾವುದು ಅಲ್ಲ ಎನ್ನುವ ಅರಿವಿರಬೇಕು. ಇದೇ ವಿವೇಕ.

ವಿವೇಕವು ಮೈವೆತ್ತು ಬಂದಂತೆ ಇದ್ದರು ಹಿರಿಯಣ್ಣನವರು. ಅವರ ಬದುಕಿನುದ್ದಕ್ಕೂ, ಬರಹದಲ್ಲೆಲ್ಲ ಇದನ್ನು ಕಾಣಬಹುದು. ಅವರು ಓದಿದವರಾದರೂ ಓದೇ ಮುಖ್ಯ ಎಂದು ಎಂದೂ ಅಂದುಕೊಳ್ಳಲಿಲ್ಲ ; ಓದಿಗಿಂತ ಅನುಭವ ಹೆಚ್ಚಿನದು. ಓದಿದುದನ್ನು ಅರಗಿಸಿಕೊಂಡು, ಅದನ್ನು ಅನುಷ್ಠಾನಕ್ಕೆ ತರಬೇಕು. ಆಗಲೇ ಓದಿಗೆ ಬೆಲೆ ಬರುವುದು. ಪುಸ್ತಕದಿಂದ ಬರುವ ಜ್ಞಾನಕ್ಕಿಂತ ಹೀಗೆ ಅನುಭವದಿಂದ ಬರುವ ಜ್ಞಾನವನ್ನೇ ನಮ್ಮ ದೇಶದಲ್ಲಿ ದೊಡ್ಡದೆಂದು ಬಗೆದಿದ್ದರು. ಪುಸ್ತಕ ಒಂದು ನಿಮಿತ್ತ ಅಷ್ಟೆ ; ವಿಚಾರವನ್ನು ಪ್ರಚೋದಿಸುವ ಒಂದು ಸಲಕರಣೆ. ಬದುಕಿನಲ್ಲಿ

ನೆಮ್ಮದಿಯನ್ನು ತರುವಂಥದು ಸಾಧನೆಯಿಂದ ಬಂದ ತಿಳುವಳಿಕೆ.

ವಿಚಾರವೆನ್ನುವುದು ಮನಸ್ಸಿನ ಕೆಲಸ; ಇದರಿಂದ ವಾದ-ವಿವಾದಗಳು ಏರ್ಪಡುತ್ತವೆ. ಜಗಳಗಳು ತಲೆದೋರುತ್ತವೆ. ಆದರೆ ವಿವೇಕವಿದ್ದರೆ ವಿಚಾರವು ಆಚಾರಕ್ಕೆ ದಾರಿಮಾಡಿ ಕೊಡುತ್ತದೆ. ಆಚಾರವೆಂದರೆ ಬದುಕುವ ಬಗೆ ಬೇರೆಯವರಿಗೆ ತೊಂದರೆಯಾಗದಂತೆ ತನ್ನ ಒಳಿತನ್ನು ಸಾಧಿಸಿಕೊಳ್ಳುವ ರೀತಿ. ಇಲ್ಲಿ ಒಳಿತೆಂದರೆ ಒಳಗಿನ ಬದುಕಿಗೆ ಸಂಬಂಧಿಸಿದುದು. ಹಿರಿಯಣ್ಣನವರು ಈ ಒಳಿತನ್ನು ಸಾಧಿಸಿಕೊಳ್ಳಲು ಬದುಕಿನುದ್ದಕ್ಕೂ ಯತ್ನಿಸಿದರು. ಶ್ರಮಿಸಿದರು. ಈ ದೃಷ್ಟಿಯಿಂದ ವಿಚಾರವನ್ನೂ ಆಚಾರವನ್ನೂ ಹೊಂದಿಸಿಕೊಂಡರು. ಅವರನ್ನು ನೋಡಿದವರಿಗೆ ತಟ್ಟನೆ ಮನವರಿಕೆಯಾಗುತ್ತಿದ್ದುದು ಅವರುಸದಾಚಾರಶೀಲರೆಂದು ವಿವೇಕಿಗಳೆಂದು, ವಿಚಾರವಂತರೆಂದು. ತಮ್ಮ ಪಾಡಿಗೆ ತಾವು ಆಹ್ನಿಕ, ಪೂಜೆಗಳನ್ನು ದಿನವೂ ಮಾಡುತ್ತಿದ್ದರು; ಇದು ಹಳೆಯ ಕಾಲದ ಪದ್ಧತಿಯಂತೆ. ಆದರೆ ಇದು ಬೇರೆಯವರಿಗೆ ತೋರಿಸುವುದಕ್ಕಲ್ಲ, ಬೇರೆಯವರನ್ನು ಮೆಚ್ಚಿಸಲೆಂದಲ್ಲ ಬೂಟಾಟಿಕೆಯಲ್ಲ, ಆಡಂಬರಕ್ಕಲ್ಲ. ತಮ್ಮ ಮನಸ್ಸಿನ ನೆಮ್ಮದಿಗಾಗಿ ಅಷ್ಟೆ; ಅದಕ್ಕೂ ಬೇರೆಯವರಿಗೂ ಸಂಬಂಧವಿಲ್ಲ. ಹಾಗೆಂದೇ ಅವರು ಮಾಡುತ್ತಿದ್ದ ಆಹ್ನಿಕ, ಆರಾಧನೆಗಳು ಇತರರಿಗೆ ತಿಳಿಯುತ್ತಿರಲಿಲ್ಲ, ತಿಳಿಯುವುದು ಅವರಿಗೆ ಇಷ್ಟವೂ ಇರಲಿಲ್ಲ.

ಹಾಗೆಯೇ, ಅವರು ಹಲವಾರು ಬಡಹುಡುಗರಿಗೆ ಹಣ ಕೊಟ್ಟು ಸಹಾಯ ಮಾಡುತ್ತಿದ್ದರು. ಆದರೆ ಅದು ಯಾರಿಗೂ ತಿಳಿಯುತ್ತಿರಲಿಲ್ಲ. ಸಹಾಯ ಪಡೆದುಕೊಂಡ



ಹುಡುಗರಿಗೂ 'ಯಾರಿಗೂ ಹೇಳಬೇಡಿ'ರೆಂದು ಹೇಳುತ್ತಿದ್ದರು. ಒಂದು ಪ್ರಸಂಗವನ್ನು ಹಿರಿಯರಾದ ಡಿ. ವಿ. ಗುಂಡಪ್ಪನವರು ನೆನೆಸಿಕೊಂಡಿದ್ದಾರೆ. ಅವರಿಗೆ ತಿಳಿದ ಒಬ್ಬರು ಸಂಸ್ಕೃತ ಎಂ. ಎ. ಪರೀಕ್ಷೆಗೆ ಓದುತ್ತಿದ್ದಾಗ ಹಿರಿಯಣ್ಣನವರಿಂದ ತಿಂಗಳು ತಿಂಗಳೂ ಹಣ ಪಡೆಯುತ್ತಿದ್ದರು. ಬಡ ಹುಡುಗನಾದುದರಿಂದ ಕಾಲೇಜು ಫೀಸು ಮತ್ತಿತರ ಓದಿನ ವೆಚ್ಚ ಇದಕ್ಕೆ ತಗುಲುವಷ್ಟು ಹಣವನ್ನು ಹಿರಿಯಣ್ಣನವರು ಆತನಿಗೆ ಕೊಡಲೊಪ್ಪಿದ್ದರು. ಒಮ್ಮೆ ಆ ಹುಡುಗನ ಸ್ನೇಹಿತನೊಬ್ಬ, ಅಷ್ಟೇ ಬಡವ, ಹಾಗೆಯೇ ವಿದ್ಯಾರ್ಥಿ, ಹಣವಿಲ್ಲದೆ ತೊಂದರೆ ಪಡುತ್ತಿದ್ದ. ಈ ಹುಡುಗ ತನ್ನ ಸ್ನೇಹಿತನಿಗೆ "ನನಗೆ ಹಿರಿಯಣ್ಣನವರು ಸಹಾಯ ಮಾಡುತ್ತಿದ್ದಾರೆ. ನೀನೂ ಅವರಲ್ಲಿ ಹೋಗಿ ಕೇಳು" ಎಂದು ಸೂಚಿಸಿದ. ಆದರೆ ಹಿರಿಯಣ್ಣನವರು ತಾವು ಅವನಿಗೆ ಮಾಡುತ್ತಿದ್ದ ಸಹಾಯದವಿಚಾರವನ್ನು ಯಾರಿಗೂ

ತಿಳಿಸಬಾರದೆಂದು ಹೇಳಿದ್ದರು ; ಈ ಹುಡುಗ ಅದನ್ನು ಮರೆತ, ಅಥವಾ ಅಷ್ಟಾಗಿ ಅದನ್ನು ಮನಸ್ಸಿಗೆ ತಂದು ಕೊಂಡಿರಲಿಲ್ಲ.

ಸ್ನೇಹಿತ ಹಿರಿಯಣ್ಣನವರ ಮನೆಗೆ ಹೋಗಿ ತನ್ನ ಕಷ್ಟವನ್ನೆಲ್ಲ ಅವರ ಮುಂದೆ ತೋಡಿಕೊಂಡ, ಅವರು "ನನ್ನ ಕೈಲಾದ ಸಹಾಯ ಮಾಡುತ್ತೇನೆ. ಆದರೆ ನನ್ನಲ್ಲಿಗೆ ಹೋಗುವಂತೆ ಯಾರಾದರೂ ಸೂಚಿಸಿದರೆ ?" ಎಂದು ಕೇಳಿದರು. ಸ್ನೇಹಿತ "ತಮ್ಮಿಂದ ಸಹಾಯ ಪಡೆಯುತ್ತಿರುವ ಈ ಹುಡುಗ (ಹೆಸರು ಹೇಳಿ) ತಿಳಿಸಿದ" ಎಂದು ಹೇಳಿದ. ಹಿರಿಯಣ್ಣನವರು, "ಒಳ್ಳೆಯದು" ಎಂದು ಹೇಳಿ ತಮ್ಮ ಕೈಲಾದಷ್ಟು ಹಣವನ್ನು ಆಗಲೇ ಕೊಟ್ಟು, ತಿಂಗಳು ತಿಂಗಳೂ ಬಂದು ತೆಗೆದು ಹೋಗುವಂತೆ ತಿಳಿಸಿ ಕಳುಹಿಸಿಕೊಟ್ಟರು.

ಕೆಲವು ದಿನಗಳಾದ ಮೇಲೆ, ತಿಂಗಳ ಮೊದಲಲ್ಲಿ, ಎಂದಿನಂತೆ ಮೊದಲಿನ ಹುಡುಗ ಹಿರಿಯಣ್ಣನವರ ಮನೆಗೆ ಬಂದ. ಹಿರಿಯಣ್ಣನವರು ಮೊದಲೇ ಕಟ್ಟಿಟ್ಟದ್ದ ಹಣವಿದ್ದ ಕಾಗದ ಪೊಟ್ಟಣವನ್ನು ಅವನ ಕೈಯಲ್ಲಿಟ್ಟರು. ಹಣ ಹೆಚ್ಚಿದ್ದಂತೆ ತೋರಿದುದರಿಂದ ಹುಡುಗ ಪೊಟ್ಟಣವನ್ನು ಬಿಚ್ಚಿ ನೋಡಿಕೊಂಡ. ಅದರಲ್ಲಿ ಮೂರು ತಿಂಗಳಿಗೆ ಸಲ್ಲಬೇಕಾದ ಹಣವನ್ನು ಒಟ್ಟಗೇ ಇರಿಸಿದ್ದರು ; ಅವನ ಕೋರ್ಸ್ ಮುಗಿಯಲು ಇನ್ನೂ ಮೂರು ತಿಂಗಳುಗಳಿದ್ದುವು. ಅಷ್ಟೇ ಅವರು ಮಾತುಕೊಟ್ಟದ್ದುದು. ಹಿರಿಯಣ್ಣನವರು ಹೀಗೇಕೆ ಮಾಡಿದರೆಂದು ಹುಡುಗನಿಗೆ ಅರ್ಥವಾಗಲಿಲ್ಲ ; ಕೇಳಿದ. ಅದಕ್ಕೆ ಅವರು "ನಾನು ನಿಮಗೆ ಮಾಡುತ್ತಿರುವ ಸಹಾಯವನ್ನು ನೀವು ಯಾರ ಮುಂದೆಯೂ ಹೇಳಬಾರದೆಂದು

ಹೇಳಿದ್ದೆನಲ್ಲವೆ ? ನೀವು ನಿಮ್ಮ ಸ್ನೇಹಿತನಿಗೆ ಹೇಳಿಬಿಟ್ಟಿರಿ. ಆದರೆ ನನ್ನ ಮಾತನ್ನು ನಾನು ಉಳಿಸಿಕೊಂಡಿದ್ದೇನೆ. ಇನ್ನು ಮೂರು ತಿಂಗಳ ಹಣ ಬಾಕಿಯಿದೆಯಷ್ಟೆ ; ಅಷ್ಟನ್ನೂ ಈಗಲೇ ಕೊಟ್ಟಿದ್ದೇನೆ. ಸರಿ, ತಾನೆ ?" ಎಂದು ಹೇಳಿದರು.

ಹುಡುಗನಿಗೆ ತನ್ನ ಮಾತನ್ನು ತಾನು ನಡೆಸಿಕೊಳ್ಳಲಿಲ್ಲವೆಂದು ನಾಚಿಕೆಯಾಯಿತು. ಆದರೆ ಹಿರಿಯಣ್ಣನವರೇನು ಬಯ್ಯಲಿಲ್ಲ, ದಂಡಿಸಲಿಲ್ಲ, ಗದರಿಸಲಿಲ್ಲ. ನಯವಾಗಿಯೇ ಅವನಿಗೆ ಪಾಠ ಕಲಿಸಿದರು. ಅವರ ರೀತಿಯೇ ಹೀಗೆ. ತಮಗೆ ಸರಿಯೆಂದು ತೋರದಿದ್ದುದನ್ನು ಮುಚ್ಚುಮರೆಯಿಲ್ಲದೆ, ಬಿಚ್ಚಿ ಹೇಳಿಬಿಡುತ್ತಿದ್ದರು. ಮೇಲಿನ ಅಧಿಕಾರಿಗಳಾಗಲೀ ಯಾರೇ ಆಗಲೀ ಅವರಿಗೇನು ಅಂಜಿಕೆಯಿಲ್ಲ, ಅನುಮಾನವಿಲ್ಲ. ತಮಗೆ ಅಸಮಾಧಾನವಾದಾಗ ಅದನ್ನು ಸ್ಪಷ್ಟಪಡಿಸುವುದಕ್ಕೆ ಅವರು ಹಿಂದು ಮುಂದು ನೋಡುತ್ತಿರಲಿಲ್ಲ. ಆದರೆ ನಿಷ್ಠುರವಾಗಿ, ಕಟುವಾಗಿ ಅವರು ಎಂದೂ ಮಾತನಾಡುತ್ತಿರಲಿಲ್ಲ. ಎಂಥ ಪರಿಸ್ಥಿತಿಯಲ್ಲಿಯೂ ಮಾತು ನಯವೇ, ಮಿತವೇ. ಎಲ್ಲಿಯೂ ಆಯ ತಪ್ಪುತ್ತಿರಲಿಲ್ಲ. ಇಂಥ ನಡೆವಳಿಕೆಗೆ ಸೌಜನ್ಯ ಎಂದು ಹೆಸರು.

ಮನೆಯ ವ್ಯವಹಾರದಲ್ಲಿಯೂ ಹಾಗೆಯೇ ಯಾರ ಮನಸ್ಸಿಗೂ ಬೇಸರವಾಗದಂತೆ, ಯಾರ ಮನಸ್ಸೂ ಮುರಿಯದಂತೆ ನಡೆದುಕೊಳ್ಳುತ್ತಿದ್ದರು. ತಮ್ಮಿಂದ ಬೇರೆಯವರಿಗೆ ಕಷ್ಟವಾಗಬಾರದು ; ಇದಕ್ಕೆ ಸಂಯಮ ಇರಬೇಕು. ಇತರರಿಂದ ತಮಗೆ ಕಷ್ಟವಾಗಬಾರದು ; ಇದಕ್ಕೆ ಸ್ಥೈರಣೆ ಇರಬೇಕು. ಇವೆರಡೂ ಹಿರಿಯಣ್ಣನವರ ಬದುಕಿನಲ್ಲಿ ಎದ್ದು ಕಾಣುತ್ತಿದ್ದುವು. ಯಾವುದನ್ನೂ ಅತಿಯಾಗಿ ಬೆಳೆಸುತ್ತಿರಲಿಲ್ಲ. ಯಾವುದನ್ನೂ ಹಚ್ಚಿಕೊಂಡು ಹೋಗುತ್ತಿರ

ಲಿಲ್ಲ ; ಅವರಿಗೆ ಬೇಕಾದುದು ಯಾವುದು, ಬೇಡವಾದುದು ಯಾವುದು ಎಂದು ಹೇಳುವುದೇ ಕಷ್ಟವಾಗುತ್ತಿತ್ತು. ಏಕೆಂದರೆ ಎಲ್ಲದರಲ್ಲಿಯೂ ಮಿತ, ಹಿತ. ಹೀಗೆ ಗೃಹಸ್ಥರಾದರೂ ಸಂನ್ಯಾಸಿಗಳಂತೆಯೇ ಬದುಕಿದ ದೊಡ್ಡ ಜೀವ ಅದು.

ಬರಹಗಳು

ಅವರ ಬರಹಗಳ ವಿಚಾರ ನಿಮಗೆ ಈ ವಯಸ್ಸಿನಲ್ಲಿಯೇ ತಿಳಿಯುವುದು ಕಷ್ಟ. ದೊಡ್ಡವರಾದ ಮೇಲೆ ಅವರ ಪುಸ್ತಕಗಳನ್ನು ನೀವು ಓದಬೇಕು. ಕೆಲವು ಸಣ್ಣ ಸಣ್ಣ ಕನ್ನಡ ಪುಸ್ತಕಗಳನ್ನು ತಾವು ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾಗುವ ಮೊದಲೇ ಬರೆದರು ; ಅವು ಈಗ ಸಿಗುವುದು ಕಷ್ಟ. ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡತೊಡಗಿದಾಗ ಈಶೋಪನಿಷತ್ತು, ಕೇನೋಪನಿಷತ್ತು, ಕಠೋಪನಿಷತ್ತು ಮತ್ತು ಬೃಹದಾರಣ್ಯಕೋಪನಿಷತ್ತು ಇವುಗಳನ್ನು ಶಂಕರ ಭಾಷ್ಯದೊಂದಿಗೆ ಇಂಗ್ಲೀಷಿನಲ್ಲಿ ತಂದರು. ಕೆಲವು ಪ್ರಕರಣ ಗ್ರಂಥಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಪ್ರಕಟಿಸಿದರು. ವೇದಾಂತದಲ್ಲಿ ತುಂಬ ಮುಖ್ಯವಾದುವು ಈ ಪ್ರಕರಣ ಗ್ರಂಥಗಳು. ಸುರೇಶ್ವರಾಚಾರ್ಯರ 'ನೈಷ್ಕರ್ಮ್ಯಸಿದ್ಧಿ' (೧೯೨೫), ಸದಾನಂದಯತಿಗಳ 'ವೇದಾಂತ ಸಾರ' (೧೯೨೯) ವಿಮುಕ್ತಾತ್ಮಕ 'ಇಷ್ಟಸಿದ್ಧಿ' (೧೯೩೩) ಇವೇ ಅವರು ಸಂಪಾದಿಸಿದ ಪ್ರಕರಣಗಳು.

ಇವೆಲ್ಲಕ್ಕಿಂತಲೂ ಹೆಚ್ಚು ಹೆಸರು ಪಡೆದ ಅವರ ಸ್ವತಂತ್ರ ಗ್ರಂಥಗಳೆಂದರೆ ಎರಡು. ಎರಡೂ ಭಾರತೀಯ ತತ್ವಶಾಸ್ತ್ರದ ಪರಿಚಯವನ್ನು ಮಾಡಿಕೊಡುವಂಥವು. ಒಂದು 'ಔಟ್

ಲ್ಸೈನ್ಸ್ ಆಫ್ ಇಂಡಿಯನ್ ಫಿಲಾಸಫಿ' ; ಇದು ಮೊದಲನೆಯ ಪುಸ್ತಕ. ಇದು ಪ್ರಕಟವಾದುದು. ೧೯೩೨ ರಲ್ಲಿ ; ಅವರು ಮಹಾರಾಜಾ ಕಾಲೇಜಿನಿಂದ ನಿವೃತ್ತರಾದ ಐದು ವರ್ಷಗಳನಂತರ. ಇದು ಹೊರಬಂದೊಡನೆಯೇ ವಿಶ್ವವಿಖ್ಯಾತವಾಗಿ ಹೋಯಿತು ; ಅಷ್ಟು ಸೊಗಸಾದ ಪುಸ್ತಕ ಅದು. ಈ ಪುಸ್ತಕದ ವಿವರಗಳನ್ನೇ ಕುರಿತು ಇನ್ನೊಂದು ಪುಸ್ತಕ ಹದಿನೇಳು ವರ್ಷಗಳ ತರುವಾಯ ಹೊರಬಂದಿತು. 'ಎಸೆನ್‌ಷಿಯಲ್ಸ್ ಆಫ್ ಇಂಡಿಯನ್ ಫಿಲಾಸಫಿ' (೧೯೪೯) ಎಂಬುದು. ಅವರು ತೀರಿಕೊಳ್ಳುವುದಕ್ಕೆ ಕೆಲವು ವರ್ಷಗಳಿಗೆ ಮುಂಚೆ ಇನ್ನೊಂದು ದೊಡ್ಡ ಪುಸ್ತಕವನ್ನು ಬರೆಯಲಾರಂಭಿಸಿದ್ದರು ; ಅದು ಮುಗಿಯಿತಾದರೂ ಅದನ್ನು ಪ್ರಕಟಿಸುವುದಾಗಲಿಲ್ಲ. ನಮ್ಮ ದೇಶದಲ್ಲಿ ಮೌಲ್ಯಗಳನ್ನು ಹೇಗೆ ಕಂಡು ಕೊಂಡಿದ್ದಾರೆ, ಹೇಗೆ ನಿರ್ಧರಿಸಿದ್ದಾರೆ ಎಂದು ವಿವರಿಸುವ 'ಇಂಡಿಯನ್ ಫಿಲಾಸಫಿ ಆಫ್ ವ್ಯಾಲ್ಯೂಸ್' ಎನ್ನುವ ಈ ಪುಸ್ತಕ ಇನ್ನೂ ಬೆಳಕಿಗೆ ಬಂದಿಲ್ಲ.

ಅವರು ಆಗಾಗ ಅಲ್ಲಲ್ಲಿ ಬರೆದ ಪ್ರಬಂಧಗಳು ಹಲವಾರು ಇದ್ದುವು ; ಮಾಡಿದ ಉಪನ್ಯಾಸಗಳಿದ್ದುವು ; ಪತ್ರಿಕೆಗಳಿಗೆ ಬರೆದ ವಿಮರ್ಶೆಗಳಿದ್ದುವು. ಇವೆಲ್ಲವನ್ನೂ ಬೇರೆ ಬೇರೆ ಸಂಪುಟಗಳಲ್ಲಿ ಪ್ರಕಟಿಸುವ ಕೆಲಸ ಅವರಿದ್ದಾಗ ಆಗಲಿಲ್ಲ. ಅವರು ತೀರಿಕೊಂಡ ಮೇಲೆ ಮೈಸೂರಿನ 'ಕಾವ್ಯಾಲಯ' ಪ್ರಕಾಶನ ಸಂಸ್ಥೆಯವರು ಇವನ್ನೆಲ್ಲ ಕೆಲವು ಪುಸ್ತಕಗಳಲ್ಲಿ ಅಂದವಾಗಿ ಹೊರತಂದಿದ್ದಾರೆ. ಈ ಪ್ರಬಂಧಗಳನ್ನೆಲ್ಲ ಅಚ್ಚಿಗೆ ಸಿದ್ಧಮಾಡುವ ಕೆಲಸವನ್ನು ಹಿರಿಯಣ್ಣನವರ ಶಿಷ್ಯರಾದ ಪ್ರೊ. ನಂಜನಗೂಡು ಶಿವರಾಮ ಶಾಸ್ತ್ರಿಗಳು ಕೈಕೊಂಡರು. ಇವರೂ ಹಿರಿಯಣ್ಣನವರಂತೆ,

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದವರು.

ಹಿರಿಯಣ್ಣನವರು ಬರೆಯಲು ಆರಿಸಿಕೊಂಡ ವಿಷಯ ಗಹನವಾದುದು; ಎಳೆಯರ ನೆಲೆಗೆ ಮೀರಿದ್ದು, ಸಾಮಾನ್ಯ ಜನರಿಗೆ ತಟ್ಟನೆ ಅರ್ಥವಾಗುವುದಿಲ್ಲ. ಆದರೆ ಅವರ ಬರಹದ ಬಗೆ ತುಂಬ ಸರಳವಾದುದು, ನೇರವಾದುದು. ಪದಗಳನ್ನು ಬಳಸುವಾಗ ಸರಿಯಾದುವನ್ನೇ ಬಳಸುತ್ತಾರೆ; ತೂಕಮಾಡಿಟ್ಟಂತೆ ಇರುತ್ತದೆ ಅವರ ಮಾತು. ಅವರು ಬರೆದ ಒಂದು ವಾಕ್ಯದಲ್ಲಿ ಯಾವೊಂದು ಪದವನ್ನೂ ಬಿಡುವ ಹಾಗಿಲ್ಲ. ಬಿಡುವ ಹಾಗಿದ್ದರೆ ಅವರೇ ಬಿಟ್ಟಿರುತ್ತಾರೆ, ಸೇರಿಸುವುದೇ ಇಲ್ಲ. ಅಥವಾ ಒಂದು ಪದವನ್ನು ತೆಗೆದು ಅದಕ್ಕಿಂತ ಸರಳವಾದ ಪದವನ್ನು ಇಡುವ ಹಾಗಿಲ್ಲ; ಏಕೆಂದರೆ ಅದಕ್ಕೆ ಸರಳವಾದ ಪದ ಇದ್ದಿದ್ದರೆ ಅವರೇ ಅದನ್ನು ಬಳಸಿಕೊಳ್ಳುತ್ತಿದ್ದರು. ಇಂಗ್ಲೀಷ್ ಭಾಷೆಯಲ್ಲಿ ವಾಕ್ಯ ರಚನೆ ಎಷ್ಟು ಸೊಗಸಾಗಿರುತ್ತದೆ ಎಂದು ತಿಳಿದುಕೊಳ್ಳಬೇಕಾದರೆ ಹಿರಿಯಣ್ಣನವರ ಬರಹವನ್ನು ಓದಬೇಕು. ಇವರ ಬರಹಗಳನ್ನು ಓದಿದ್ದ ಇಂಗ್ಲೆಂಡ್ ದೇಶದ ಪಂಡಿತನೊಬ್ಬ "ಇವರ ಮಾತೃಭಾಷೆ ಇಂಗ್ಲೀಷ್ ಅಲ್ಲವೆ?" ಎಂದು ಆಶ್ಚರ್ಯಪಟ್ಟ. ಹುಟ್ಟಿದಾಗಿನಿಂದ ಇಂಗ್ಲಿಷ್ ಭಾಷೆಯನ್ನೇ ಕಲಿತವರು ಬರೆಯುವಂತೆಯೇ ಅವರು ಬರೆಯುತ್ತಿದ್ದರು. ಇದು ಯಾರಿಗಾದರೂ ಆಶ್ಚರ್ಯವನ್ನು ತರುವ ಸಂಗತಿಯೇ.

ಅಂತೂ, ಹಿರಿಯಣ್ಣನವರು ನಮ್ಮ ದೇಶದ ದೊಡ್ಡ ಜೀವಗಳಲ್ಲಿ ಒಂದು. ಯಾವ ದೇಶದಲ್ಲಿಯೂ ಇಂಥವರು ಕೆಲವೇ ಮಂದಿ ಇರುತ್ತಾರೆ; ಹಿರಿಯಣ್ಣನವರಂಥ ಪಂಡಿತರಾಗಲೀ ಪ್ರಾಧ್ಯಾಪಕರಾಗಲೀ ವ್ಯಕ್ತಿಯಾಗಲೀ ಬಹಳ

ಮಂದಿ ಇರುವುದಿಲ್ಲ. ನಮ್ಮ ದೇಶದ ಪುಣ್ಯದಿಂದ ಅವರು ಈ ಕಾಲದಲ್ಲಿ ನಮ್ಮ ನಡುವೆ ಇದ್ದರು. ಗದ್ದಲವಿಲ್ಲದೆ ದೊಡ್ಡ ಕೆಲಸವನ್ನು ಸಾಧಿಸಿ, ತಾವು ಬದುಕಿದ ಬಗೆಯಿಂದಲೇ ಜನರಿಗೆ ಉಪದೇಶಮಾಡಿ, ಬಂದಷ್ಟೇ ನಾಜೂಕಾಗಿ ಮರೆಯಾದ ಮಹನೀಯರು ಇವರು. ನಾಡಿನಲ್ಲೆಲ್ಲ ಕೀರ್ತಿಯನ್ನು ಗಳಿಸಿ, ಉನ್ನತ ಹುದ್ದೆಗಳನ್ನು ಪಡೆದು, ಗೌರವವನ್ನೂ ಹಣವನ್ನೂ ಪಡೆದು, ಜನನಾಯಕರಾಗುವ ಸಾಮರ್ಥ್ಯ ಅವರಿಗಿದ್ದಿತು; ಆದರೆ ಅವರ ಪ್ರವೃತ್ತಿ ಅದಲ್ಲ. ಮರೆಯಲ್ಲಿಯೇ ನಿಂತು, ತಮ್ಮ ಪಾಡಿಗೆ ತಾವು ತಮಗೆ ತೋರಿದ ಕೆಲವನ್ನು ಮುಗಿಸುವ ಸ್ವಭಾವ ಅವರದ್ದು. ನೂರಾರು, ಸಾವಿರಾರು, ಜನರನ್ನು ಕೆದಕಿ, ಕೆರಳಿಸಿ, ನಡೆಯಿಸುವ ಶಕ್ತಿ ಅವರಿಗಿರಲಿಲ್ಲವೆಂದಲ್ಲ. ಆದರೆ ತಮ್ಮ ಹತ್ತಿರ ಬಂದ ಹತ್ತುಮಂದಿಗೆ ತಮ್ಮ ನಡೆನುಡಿಗಳಿಂದ ಒಳ್ಳೆಯ ದಾರಿ ತೋರಿಸಿದರೆ ಸಾಕೆಂದು ಅವರು ಬಗೆದಿದ್ದರು. ಅವರು ಮಾಡಿದುದೂ ಹೀಗೆಯೇ.

ಅವರ ತೇಜಸ್ಸು ಎಂಥದೆನ್ನುವುದು ಅವರನ್ನು ಬಲ್ಲವರಿಗೇ ಗೊತ್ತು. ಬದುಕಿನಿಂದಲೇ ಬೆಳಕನ್ನು ಕೊಡುವುದು ಸಾಧ್ಯ ಎನ್ನುವುದಕ್ಕೆ ಹಿರಿಯಣ್ಣನವರು ನಿದರ್ಶನ. ದೂರದವರಿಗೆ ಅವರ ಹಿರಿಮೆಯ ಅರಿವಾಗುವುದು ಅವರ ಬರಹಗಳಿಂದ. ಬದುಕಿನಂತೆಯೇ ಬರಹವೂ ಇದ್ದುದು ಒಂದು ವಿಶೇಷ. ಅಂತೂ, ಇಂಥ ದೊಡ್ಡ ಚೇತನವೊಂದು ನಮ್ಮ ದೇಶದಲ್ಲಿ ಕಾಣಿಸಿಕೊಂಡಿತು, ಕೆಲಸಮಾಡಿತು ಎನ್ನುವುದೇ ನಮ್ಮ ಸಮಾಧಾನ.

ಕನ್ನಡದ
ಕಥೆಗಾರರು

ಕನ್ನಡದ
ಕವಿ ಪುಂಗವರು

ಆಧುನಿಕ
ಕರ್ನಾಟಕ
ನಿರ್ಮಾಪಕರು

ಕರ್ನಾಟಕದ
ವೈಭವ

ಕರ್ನಾಟಕದ
ಸುವರ್ಣ ಯುಗ



*

ಇಂಡಿಯಾ ಬುಕ್ ಹೌಸ್ — — ಬೆಂಗಳೂರು ೯